1933

Acc No
020

ಶಿವಾನುಭವ ಗ್ರಂಥಮಾಲಾ ನಂ॥ ೪೬

# ಹರಿಹರನ ರಗಳೆಗಳು.

## ಭಾಗ ೩.

ಸಂಪಾದಕರು.

**ರಾ॥ ಸಾ॥ ಫ. ಗು. ಹಳಕಟ್ಟಿ,**

ಬಿ. ಎ. ಎಲ್. ಎಲ್. ಬಿ. ವಿಜಾಪುರ.

೧೯೩೩.

**ಬೆಲೆ ೬ ಆಣೆ.**

(ಈ ಗ್ರಂಥದ ಎಲ್ಲ ಹಕ್ಕುಗಳನ್ನು ಗ್ರಂಥಕರ್ತರು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೆ.)

ACC NO.

ಗ್ರಂಥಾಲಯ

## ಪೀಠಿಕೆ.

ಈಗಿನ ಗ್ರಂಥದಲ್ಲಿ ಶಂಕರದಾಸಿಮಯ್ಯ ಮತ್ತು ಆದಯ್ಯ ಈ ಶಿವಶರಣರ ರಗಳೆಗಳನ್ನು ಪ್ರಸಿದ್ಧಿಸಿದ್ದೇವೆ. ಇವುಗಳನ್ನು ಮಹಾ ಕವಿಯಾದ ಹರಿಹರನು ರಚಿಸಿದನೆಂದು ಪ್ರತೀತಿ ಇದೆ. ಈ ಉಭಯ ಮಹಾನುಭಾವರು ವೀರಶೈವ ಸಮಾಜದ ಆರಂಭಕಾಲದಲ್ಲಿ ಧರ್ಮೋನ್ನತಿಯ ಸಲುವಾಗಿ ಮಹತ್ತರ ಕಾರ್ಯಗಳನ್ನು ಮಾಡಿದವರಾದ್ದರಿಂದ ಅವರ ರಗಳೆಗಳನ್ನು ನಾವು ಈಗ ಪ್ರಸಿದ್ಧಿಸಿರುವೆವು. ಹರಿಹರನು ವೀರಶೈವ ಕವಿಗಳಲ್ಲಿ ಬಹಳ ಹಿಂದಿನವನು. ಆದ್ದರಿಂದ ಅವನು ಇವರ ವಿಷಯವಾಗಿ ಬರೆದ ಸಂಗತಿಗಳಿಗೆ. ನಾವು ಹೆಚ್ಚಿಗೆ ಮಹತ್ವ ಕೊಡುವದು ಅವಶ್ಯವಾಗಿದೆ.

ಈ ರಗಳೆಗಳನ್ನು ನಾವು ತುಮಕೂರು ಜಿಲ್ಲೆಯಲ್ಲಿರುವ ದಂಡಿನ ಶಿವರದಲ್ಲಿರುವ ಶಿ। ಮೂ. ಕಲ್ಲಯ್ಯನವರಲ್ಲಿ ದೊರೆದ ಪ್ರತಿ ಮತ್ತು ಶಿ। ಮೂ. ಶಿವಮೂರ್ತಿ ಶಾಸ್ತ್ರಿಗಳು ಹುಲುಕುಂಟೆಮಠ ಕೀರ್ತನಕೇಸರಿ ಮು. ತುಮಕೂರು ಇವರು ದೊರಕಿಸಿದ ಪ್ರತಿ ಹೀಗೆ ಈ ಎರಡು ಪ್ರತಿಗಳ ಸಹಾಯದಿಂದ ಪ್ರಕಟಿಸಲಾಗಿದೆ. ಈ ಪ್ರಕಾರ ಈ ಕಾರ್ಯದಲ್ಲಿ ಈ ಉಭಯ ಮಹನೀಯರು ಸಹಾಯ ಮಾಡಿದ್ದಕ್ಕೆ ನಾವು ಅವರ ಆಭಾರಿಯಾಗಿದ್ದೇವೆ.

ಫ. ಗು. ಹಳಕಟ್ಟಿ.
ಸಂಪಾದಕ.

# ಅನುಕ್ರಮಣಿಕೆ.


| | ಪುಟ. |
|---|---|
| ೧. ಶಂಕರ ದಾಸಿಮಯ್ಯನ ರಗಳೆ. | ೧—೨೭ |
| ೨. ಆದಯ್ಯನ ರಗಳೆ. | ೨೮—೫೨ |


# ಹರಿಹರನ ರಗಳೆಗಳು.

ಭಾಗ ೨.

## ಶಂಕರದಾಸಿಮಯ್ಯನ ರಗಳೆ.

ವೃತ್ತಃ— ಅಪ್ರತಿಮ ಪ್ರಭುವಜಾಂಡಕ ಪ್ರಭು ಸರ್ವದೇವರಾ ।
ಜಪ್ರಭು ನಿರ್ಮಲಪ್ರಭು ನಿರಾವರಣ ಪ್ರಭು ಕೇಳು ಭಾಳನೇ ।
ತ್ರಪ್ರಭುಹಂಪೆಯಾಧ್ದ ನೊಲವಿಂ ಮಿಗೆ ಶಂಕರದಾಸಿಮಯ್ಯನಂ ।
ವಿಪ್ರಕುಲಾರ್ಕನಂ ಮೆರೆದನಾನತ ಜಂಗಮ ಮಂಗಳಾಸ್ಪದಂ ॥

### ರಗಳೆ.

ಶ್ರೀಮೇದಿನೀತಳದೊಳೊಪ್ಪುಗು ನಿರಂತರಂ
ಪ್ರೇಮದಿಂ ಕಂದಶಿಲೆ ಎಂಬ ನಾಮದ ಪುರಂ
ಅಲ್ಲಿರ್ಪನೋರ್ವ ವಿಪ್ರಂ ಸದಾಚಾರದಿಂ
ಸಲ್ಲಲಿತ ಶೈವಧರ್ಮದ ಮಾರ್ಗನಿಯತದಿಂ
ಗೋವಿಂದದೇವನೆಂಬುದು ತನಗೆ ಪೆಸರಾಗೆ
ಭಾವಿಸುವಡಃಮ್ಸ್ನೆ ಎಂಬ ಸತಿ ತನಗಾಗೆ
ಸಂತ ಸುಖದಿಂದಿರ್ದು ವೈರಾಗ್ಯವಡೆಗೊಂಡು
ಚಿಂತಿಸಿದನಲ್ಲಿ ನೆರೆ ಸಂಸಾರವಂ ಕಂಡು
ವಾರಣಾಸಿಗೆ ಪೋಪೆನೆಂದು ಮನದೊಳ್ನೆನೆದು
ಸಾರವತ್ಯಂತ ಸುಖವನೆ ಪಡೆವೆನೆಂದೊಸೆದು
ಭರದಿಂ ಪ್ರಯಾಣೋಚಿತ ಪ್ರಕರಧರನಾಗಿ
ನೆರೆ ಪುಣ್ಯಪಥದತ್ತ ವಿಪ್ರನು ಕ್ರಮವಾಗಿ
ನಡೆತಂದು ತನ್ಮಾರ್ಗೆ ಗಾವುದದೊಳಿಪ್ಪಿರ್ಪ
ಜಡೆಯ ಶಂಕರದೇವರೊಲ್ಪಲ್ಲಿ ನೆಲಸಿರ್ಪ

ನವಿಲೆಯೊಪ್ಪದಸಿಂ ಪರಸ್ನಾನಮಂ ಮಾಡಿ
ಶಿವನಿಳಯಮಂ ಪೊಕ್ಕು ನಲವಿಂದೆ ಮಿಗೆ ನೋಡಿ
ರಂಗಮಂಟಪದೊಳಗೆ ಬಂದು ಕುಳ್ಳಿರ್ದಿರಲು
ಗಂಗಾಧರಂಗೆ ಪೊಡಮಟ್ಟು ಕುಳ್ಳಿರ್ದಿರಲು

ಶಿವನ ಮಜ್ಜನಕೆ ತರ್ಪಗ್ಗಣಿಯ ಸಂಭ್ರಮಂ
ನವ ಪರಿಮಳಂಬೆತ್ತ ಕುಸುಮ ಕುಲವಿಭ್ರಮಂ
ಮಜ್ಜನಕ್ಕೆರೆವ ಶಿವಭಕ್ತ ಸಂದೋಹದಿಂ
ಸಜ್ಜನ ಸ್ಥಾನದೊಳು ನಡೆಸುವತಿನೇಹದಿಂ
ಪನ್ನೀರ ಚಂದನದ ಪರಮ ಸೌರಭ್ಯದಿಂ
ಪನ್ನಗಾಧರಗೆಸೆವ ಪೂಜೆಯಾನಂದದಿಂ
ಅಗಿಲು ಗುಗ್ಗುಳ ಚಂದನದ ಪರಿಮಳಂಗಳಿಂ
ಮಿಗೆ ತೊಳಗಿ ಥಳಥಳಿಸಿ ಬೆಳಗುವಾರತಿಗಳಿಂ
ಪರಮನಾರೋಗಣೆಯ ವಿಭವ ವಿಸ್ತಾರದಿಂ
ಪರಿಪರಿಯಲೆಸೆವ ಶೈವಾಗಮ ವಿಚಾರದಿಂ
ಸೊಗಸು ಮೆರೆಯಲು ಪುರಾಣ ಪ್ರಸಂಗಂಗಳಿಂ
ಬಗೆ ಮಿಗಿಲ್ಕೇಳಿಸುವ ಗೀತವಾದ್ಯಂಗಳಿಂ
ಇಂತೆಸೆವ ಪರಮನುತ್ಸಾಹ ಸಂಕುಲವಲ್ಲಿ
ಕಂತುಮದವೈರಿಯ ನಿರಂತ ಸಂಪದವಲ್ಲಿ
ತನ್ನಯ ಮನಕ್ಕೆ ಸುಖಮಂ ಕೊಡುತ್ತಿರಲಂದು

ಇನ್ನೇಕೆ ವಾರಣಾಸಿಯ ಪಯಣವೆನಗೆಂದು
ಇಲ್ಲಿರ್ಪೆನಿಲ್ಲಿರ್ಪೆ ನಿನ್ನಗಲೆ ನಿನ್ನಗಲೆ
ಒಲ್ಲೆನಿನ್ನೆಲ್ಲಿಗಂ ಪೋಗೆ ನಾನಿಂತು ಸಲೆ
ಎಂದು ತನ್ನೂರ್ಗೆ ಭರದಿಂ ಮರಳಿ ನಡೆತಂದು
ಸಂದಣಿಪ ಮೋಹದಿಂ ನಿಚ್ಚನಿಚ್ಚಂ ಬಂದು
ಜಡೆಯ ಶಂಕರದೇವರಂ ದರುಶನಂ ಮಾಡಿ
ಎಡೆಗೊಂಡ ಭಕ್ತಿಯಿಂ ಕಿವಿವಿಡಿದು ಕುಣಿದಾಡಿ
ಮಿಗೆ ನೆಚ್ಚಿ ಮೈಮೆಚ್ಚಿ ಕೈಯ್ಯ ಬೆರಳಂ ಕಚ್ಚಿ
ಬಗೆ ತಿಳಿದು ಬಲ್ಪಳಿದು ಮಾಣ್ಪುತ್ತ ಕಣ್ಮುಚ್ಚಿ



ಭಕ್ತಿ ಸುಖಮಂ ತನ್ನ ಮನದಣಿಯಲನುಭವಿಸಿ
ಯುಕ್ತಿ ಪೊರ್ದದ ನೇಹದೊಳಗೆ ಎಚ್ಚರು ಸೂಸಿ
ಮೈಯಿಕ್ಕಿ ಪೊಡಮಟ್ಟು ಕಾರುಣ್ಯಮಂ ತೋರಿ
ಕೈಯೆತ್ತಿ ಕೈಯೆತ್ತಿ ನಡೆದು ಅಲ್ಲಿಯ ಬೀರಿ
ಎನಗೆ ವಾರಣಾಸಿಯಮರ ನದಿಯುಂ ನೀನೆ
ಎನಗೆ ದಿವ್ಯ ಕ್ಷೇತ್ರವುಂ ನೇತ್ರವುಂ ನೀನೆ
ಎನಗೆ ನಿತ್ಯಾವಾಸಮುಂ ದೇಶಮುಂ ನೀನೆ
ಎನಗೆ ಪುಣ್ಯ ಪ್ರಕರಮುಂ ಸಕಲವುಂ ನೀನೆ
ಎನಗೆ ನಿರ್ಮಳ ಕರಣಮುಂ ಹರಣಮುಂ ನೀನೆ
ಎನಗೆ ನಿಶ್ಚಳ ಸೌಖ್ಯಮುಂ ಭೋಗಮುಂ ನೀನೆ
ಎನಗೆ ನಿರ್ಮಳ ಜ್ಞಾನವುಂ ಮೌನವುಂ ನೀನೆ
ಎನಗೆ ಪರಮ ಜ್ಞಾನ ಮಂತ್ರತಂತ್ರಂ ನೀನೆ
ಎನಗೆ ನಿತ್ಯಾನಂದ ಕರ್ತನೆನಿಪಂ ನೀನೆ
ಎನಗೆ ನಿಶ್ಚಲ ನಿತ್ಯವುಂ ಸತ್ಯವುಂ ನೀನೆ
ಎಂದು ನುತಿಗೈದು ನೂತನ ಸುಖಮನೊಳಕೊಂಡು
ಇಂದುಧರನಲ್ಲಿ ಭಕ್ತಿಯ ಭರವನೆಡೆಗೊಂಡು
ಇಂತನುದಿನಂ ತನ್ನ ಪುರದಿಂದ ನಡೆತಂದು
ಸಂತತಂ ಶಿವನ ಸದ್ಭಕ್ತಿಯ ಮನಂದಂದು
ಪಗಲೆನ್ನದಿರುಳೆನ್ನದೊಲವಿಂ ನಿರಂತರಂ
ಮಿಗೆ ಗಾಳಿ ಮಳೆ ಶೀತ ವಾತಪದೊಳಂ ಕರಂ
ಬಂದು ಬಂದಭವನಂ ನಿಚ್ಚ ಓಲೈಸುತಿರೆ
ಇಂದುಧರನಂ ಮರೆಯದನುದಿನಂ ನೆನೆಯುತಿರೆ

ಜಡೆಯ ಶಂಕರದೇವನಲ್ಲಿ ಕರುಣಿಸಿ ನೋಡಿ
ಪೊಡವಿಗೀ ಭಕ್ತನಂ ಮೆರೆವೆನೆಂದನು ಮಾಡಿ
ಒಂದು ದಿವಸಂ ಕನಸಿನೊಳಗೆ ದಯೆಯಿಂ ಬಂದು
ಇಂದುಕಳೆ ಜಡೆ ಮಲಿದೊಪಲ್ಭಸಿತದಿಂ ನಿಂದು
ಎಲೆ ಮಗನೆ ಚಳಿಮಳೆಯೊಳೆಡೆಯಾಡಲೇಕೈಯ್ಯ
ನಲಿವು ಮಿಗೆಯೊಲವಿಂದ ನಮ್ಮೂರ್ಗೆ ಬಾರೈಯ್ಯ
ಬಂದೊಡುಪದೇಶಮಂ ಮಾಡಿ ಕರುಣಿಪೆನೆಂದು

ಇಂದುಧರನೊಲ್ದು ಬೆಸಸಲ್ಕೆ ಕರುಣದೊಳಂದು
ಎಚ್ಚತ್ತು ಮೆಲ್ಲನಂತಂತು ಪುಳುಕದೊಳಾಳ್ದು
ಬೆಚ್ಚರಂ ಶಿವನ ಮುಕ್ತಿಯನಕ್ಕರಿಂ ತಾಳ್ದು
ಕನಸಿನೊಳಗೊಗೆದ ಸುಖ ಮನಸಿನೊಳಗಂಕುರಿಸಿ
ಕನಸು ಮನಸೆಂಬ ವಿವರಣೆ ಮನಕ್ಕರಿದೆನಿಸಿ
ಮೆಲ್ಲಮೆಲ್ಲನೆ ತಿಳಿಪಿನಿಂದ ಮನದೊಳಗರಿದು
ಸಲ್ಲೀಲೆಯಿಂ ಶಿವಂ ಕರುಣಿಸಿದನೆಂದರಿದು
ಎನ್ನೊಡೆಯನೊಲವಿಂ ಬರಲೆಂದು ಬೆಸಸಿದಂ
ಎನ್ನಾರ್ಪನತಿ ಕರುಣದಿಂದ ಕೃಪೆ ಮಾಡಿದಂ

ಎಂದಲ್ಲಿ ಸತಿವೆರಸಿ ಪೊರಮಟ್ಟು ನಡೆಗೊಂಡು
ಬಂದ ಮಯ್ಯೂರಪುರದೊಳಗೆ ಚಿತ್ತಂಗೊಂಡು
ಜಡೆಯಶಂಕರದೇವರಂ ಕಂಡು ಪೊಡಮಟ್ಟು
ಕಡು ನೇಹಮಂ ತನ್ನ ಮನದ ಮೊನೆಯೊಳಗಿಟ್ಟು
ನವಿಲೆಯೊಳು ಶಿವಪಾದಸಂಗಸುಖದಿಂದಮಿರೆ
ಕವಲರಿಯದಚ್ಚ ಶಿವಸುಖದ ಭರದಿಂದ ಬರೆ

ಒಂದು ದಿವಸಂ ನೇಮಮಂ ಮಾಡುತಿರಲಂದು
ಇಂದುಧರನಿಂತೆಂದನೊಲ್ದು ಕರುಣದೊಳಂದು
ನಾಳೆಯುಪದೇಶಮಂ ಮಾಡಿದಪೆನೆಲೆ ಮಗನೆ
ನಾಳೆ ನೆರೆ ಶುದ್ಧಾಂಗನಾಗಿರ್ಪುದೆಲೆ ಮಗನೆ
ಎಂದು ಕರುಣಿಸಿದೆಯೆಂದೀ ಪರಿಯೊಳಂದೊಲ್ದೆ
ಒಂದು ಪರಿಯಿಂದೊಲ್ದೆ ನಿನ್ನಿಷ್ಟೆಯಿಂದೊಲ್ದೆ
ಅಭವ ಕರುಣಿಸಿದಕ್ಕೆ ಕೃಪೆಗೆಯ್ದುದೆಲೆ ದೇವ
ವಿಭುವೆ ಬಿನ್ನೈಸಿದಂ ಸಲಿಸವೇಳ್ವುದು ದೇವ
ದೇವ ಕರುಣಿಸಿತಕ್ಕೆ ನೊಸಲ ಕಣ್ಣಂ ಕೊಟ್ಟು
ದೇವ ಕರತಳವನೆನ್ನುತ್ತಮಾಂಗದೊಳಿಟ್ಟು
ಅಪ್ರತಿಮ ಗುರುವೆ ಸುರತರುವೆ ಕರುಣಿಪುದೆನಗೆ
ಸುಪ್ರಸಿದ್ಧ ಪ್ರಭುವೆ ವಿಭುವೆ ಕರುಣಿಪುದೆನಗೆ
ಅಕಲಂಕ ಶಶಿಕಲಾಕಿರಣ ಕರುಣಿಪುದೆನಗೆ
ಸಕಲ ದೇವಾಭರಣ ನಿಕರ ಕರುಣಿಪುದೆನಗೆ



ಮೃಡ ಭೀಮ ಭಾಳಾಕ್ಷ ಭರ್ಗ ಕರುಣಿಪುದೆನಗೆ
ಜಡೆಯ ಶಂಕರದೇವ ಗುರುವೆ ಕರುಣಿಪುದೆನಗೆ
ಎನೆ ಕೇಳ್ದು ಶಶಿಧರಂ ಕರುಣಿಸಿದೆನೆಂದೆನಲು
ಮನವಾರೆ ನೊಸಲಕಣ್ಣಿತ್ತೆ ನಾನೆಂದೆನಲು
ಕೇಳುತಂ ಪುಟವೇರುತಂ ಕೊರ್ಬಿ ಪೆರ್ಚುತಂ
ಬಾಳುತಂ ಬಲ್ಪೇರುತಂ ನಚ್ಚಿ ಪೆರ್ಚುತಂ
ಬೀಗುತಂ ಬಿಕ್ಕುತಂ ತೇಗುತಂ ತೂಗುತಂ
ರಾಗದಿಮ್ಮಡಿಸಿ ನಲಿದೊಗ್ಗುತಂ ಹಿಗ್ಗುತಂ

ನಡೆತಂದು ಮರುದಿವಸದುದಯ ಸಮಯದೊಳೇಳ್ದು
ಕಡುಗೂರ್ತು ನಿರ್ಮಲಸ್ನಾನ ಸುಖಮಂ ತಾಳ್ದು
ಭಸಿತಮಂ ತೀವಿಟ್ಟು ಧವಳ ವಸ್ತ್ರಮನುಟ್ಟು
ಎಸೆವ ರುದಾಕ್ಷ ಮಾಲೆಗಳನಳವಡೆ ತೊಟ್ಟು
ಸುಲಿಪಲ್ಲ ಬೆಳಗು ಬೆಳ್ದಿಂಗಳಂ ಬೀರುತಿರೆ
ನೆಲೆಗೊಂಡ ದೇಹರುಚಿ ಸುರುಚಿರವ ಸೂಸುತಿರೆ
ನಡೆದು ಬಂದಾ ಶಿವಾಲಯದ ಶಿವಮಂಟಪದಿ
ಜಡೆಯ ಶಂಕರ ದೇವರಿರ್ಪ ಗರ್ಭಗೃಹದಿ
ನಿಂದು ಕುಳ್ಳಿರ್ದು ಕಡು ನಿಷ್ಠೆಯಿಂ ಕೈಮುಗಿದು
ಸಂದಣಿಸಿ ಮೈಯ್ಯೊಳಗೆ ಪುಳಕಂಗಳಂ ನೆಗೆದು
ಲಿಂಗದಿಂ ನಡೆತಂದನಾ ಜಡೆಯ ಶಂಕರಂ
ಅಂಗರುಚಿ ಕಣ್ಗೆ ಸವಿಯಂ ಕರೆಯಲೀಶ್ವರಂ
ಪಿಂಗಳ ಜಟಾಭಾರ ಗಂಗೆ ಮಧ್ಯದೊಳೆಸೆಯೆ
ತುಂಗ ತಟದಲ್ಲಿ ಮರಿದಿಂಗಳೊಪ್ಪಂ ಬಡೆಯೆ
ಭಾಳಾಕ್ಷ ಫಣಿ ಕುಂಡಲಂ ಪಂಚವದನದಿಂ
ನೀಲಗಳ ವೀರೈದು ಭುಜವಜಕಪಾಲದಿಂ
ಕರಿಚರ್ಮವಹಿಕಟಕ ಡಮರುಗ ತ್ರಿಶೂಲದಿಂ
ಸುರ ಶಿರೋಮಾಲೆ ಪುಲಿದೊವಲೊಪ್ಪೆ ರಾಗದಿಂ

ಶಂಕರಂ ಬಂದು ಶರಣನನಕ್ಕರಿಂ ನೋಡಿ
ಬಿಂಕದಿಂ ಸ್ನೇಹರಸದೊಳಗೆ ಸೊಕ್ಕೋಲಾಡಿ

ನೇಲೆ ದುಂದುಭಿ ಮೊಳಗೆ ಪೂಮಳೆಗಳುಂ ಸೂಸೆ
ಭೂಲಲನೆ ಗುಡಿಗಟ್ಟೆ ದೇವಗಣತತಿ ಪರಸೆ
ಸತ್ಯ ಗುರುಶಾಂತ ಗುರುಸಕಲ ಲೋಕೈಕಗುರು
ನಿತ್ಯ ಗುರು ನಿಜದ ಗುರು ಉತ್ತಮದ ಪರಮಗುರು
ದುರಿತ ಕುಲಮಂ ನಿವಾರಿಸುವತುಳಹಸ್ತಮಂ
ಶರಣ ಸಂತತಿಗಭಯಮೀವ ಘನಹಸ್ತಮಂ
ಉದಯಾರ್ಕರುಚಿಗೆ ಮಿಗೆ ಮೆರೆವ ಕರಕಮಲಮಂ
ಸವಮಲ ಶಶಿಶ್ರೀಯನೀವ ಹಸ್ತಾಗ್ರಮಂ
ಕುಳ್ಳಿರ್ದ ನಿಜಶರಣನುತ್ತಮಾಂಗದೊಳಿಟ್ಟು
ಬಳ್ಳಿವರಿವಡ್ಡೈಪ ಸೇಹಮಂ ಮುಂದಿಟ್ಟು
ತನ್ನುವಂ ಭಕ್ತಿಯುಂ ಪಂಚಾಕ್ಷರಿಯನರುಪಿ
ಉನ್ನತ ಜ್ಞಾನಮಂ ತನ್ನ ಮನದೊಳಗರುಪಿ
ಪರಮನಿಂತುಪದೇಶಮುಮನಕ್ಕರಿಂ ಮಾಡಿ
ಶರಣನಂತಸ್ಥದೊಳು ಸಾಮರ್ಥ್ಯಮಂ ಕೂಡಿ
ಅಸಮನಯನಂ ಸಕಲ ಕಾರುಣ್ಯಮಂ ನೀಡಿ
ನೊಸಲೊಳಗೆ ನೊಸಲಿಟ್ಟು ಭರದಿಂದ ಮುಂಡಾಡಿ
ನೊಸಲ ಸಂಗಡ ದಿಟ್ಟೆ ಗರ್ಭಿಣಿಯೊಲಾಗುತಿರೆ
ನೊಸಲ ಕಣ್ಣೊಂದು ಕಣ್ಣಂ ಪಡೆದು ಕೊಡುತಮಿರೆ
ನೊಸಲ ಕಣ್ಣಜ್ಯೋತಿ ನೊಸಲ ಕಣ್ಣಾಗುತಿರೆ
ಪೊಸಯುಕ್ತಿ ಶಿವಭಕ್ತಿ ಭಾವದೊಳ್ನೆಲಸುತಿರೆ
ಕಣ್ಣಕರ್ಪಂ ನೊಸಲಕಣ್ಣೆ ಕಪ್ಪಾಗುತಿರೆ
ಕಣ್ಣಾಪ್ಪನಿತ್ತ ಕಣ್ಣಲ್ಲಿ ಸರಿಯಾಗುತಿರೆ
ಜ್ಯೋತಿಯುಂ ಜ್ಯೋತಿಯುಂ ಪೊತ್ತಿಸಿದ ತೆರನಾಗೆ
ಮಾತಿಂಗೆ ಪೆರತಿಲ್ಲ ಭಾವವೆರಡೊಂದಾಗೆ
ಮುಂಡಾಡಿ ಮುಕುರ ಮುಕುರವ ನೋಡಿದಂತಾಗೆ
ಕೊಂಡಾಡಿ ತಾನೆ ತನ್ನಂ ನೋಡಿದಂತಾಗೆ
ಆತ್ಮಾ ವೈ ಪುತ್ರ ನಾಮಾಸಿ ಎಂಬಂತಾಗೆ
ಸ್ವಾತ್ಮನಲ್ನೊಸಲ ಕಣ್ಣಾತನೋಳ್ತಾನಾಗೆ
ದೇವಂಗೆ ಭಕ್ತನೆಣೆ ಭಕ್ತಂಗೆ ದೇವನೆಣೆ
ದೇವಂಗೆ ಭಕ್ತಂಗೆ ಸದ್ಭಕ್ತಿ ತಾನೆ ಹೊಣೆ



ಎಂಬಂತೆಯುಪದೇಶಮಂ ಪಡೆದು ವಿಸ್ತರಂ
ತ್ರ್ಯಂಬಕನ ಭಾಳದೊಳಗೆಡೆವಿಡಿದು ಮತ್ಸರಂ
ಜ್ಞಾನಾಗ್ನಿ ಕಣ್ದೆರೆದ ತೆರದೊಳಿರ್ದಂ ಕರಂ
ಧ್ಯಾನದೊಳ್ಪುಟ್ಟಿ ಬೆಳೆವುತಿರ್ದನನಂತರಂ

ಅಸಮಾಕ್ಷನಿತ್ತುದಂ ಪಡಿನೋಳ್ಪೆ ನಾನೆಂದು
ಬಿಸಿಗಣ್ಣ ಪಡಿಸಣವನರಿದು ನೋಡುವೆನೆಂದು
ಸಿಡಿಲ ಕಿಡಿಯಂತಿರ್ಪ ಎವೆಯನೊಯ್ಯನೆ ತೆರೆಯೆ
ಘುಡಿಘುಡಿಪ ಘುಳುಘುಳು ಜ್ವಾಲೆ ಭುಗಿಲೆನೆ ನೆಗೆಯೆ
ವಿಷ್ಣುಪ್ರತಿಮೆಯೊಡೆದು ಸಿಡಿದು ಸಿಕ್ಕನೆ ಸೀಳೆ
ವಿಷ್ಣುವಿನ . ರೂಪೊಡೆದು ಕೆಡೆದು ಧರಣಿಗೆ ಬೀಳೆ
ಭಾವಿಪೊಡಜ ಪ್ರತಿಮೆ ಬಿರಿದು ಜಗ್ಗನೆ ಜರಿಯೆ
ಮೂವತ್ತುಮೂದೇವರ್ಕೈದೆ ಸುಗಿದುಂ ಬಿರಿಯೆ
ಪರ ಸಪ್ತಮಾತೃಕೆಯರುರಿದು ಮಣ್ಣೊಳ್ಬೆರೆಯೆ
ನೆರೆಪಷ್ಟ ವಸುಗಳೆಲ್ಲಂ ಫಳಫಳನೆ ಬಿರಿಯೆ
ನೊಸಲೊಳಗೆ ಪುಟ್ಟಿ ಕಡುಗೋಪದಿಂದಂ ಬೆಳೆದು
ಪಸರಿಪ ಪ್ರತಿಮೆಗಳ ಬಾಯ್ವಿಣ್ಣೆಯುಂ ತಳೆದು
ಉರವರಿಯೆ ನಡೆಗಲಿತು ಭುಗಿಲೆಂದು ನುಡಿಗಲಿತು
ಪುರ ಉರಿಯೆ ನೋಡಿವನ ಚಾರಿತ್ರಮಂ ಕಲಿತು
ಸುತ್ತಣ ಪ್ರತಿಮಾದಿಗಳ್ಪೇಳ ಪೆಸರಿಲ್ಲ

ಎತ್ತಲುಂ ನೊಡೆ ಭಾವಿಪೊಡಲ್ಲಿ ರೂಪಿಲ್ಲ
ದಿರಲಲ್ಲಿ ಮಿಕ್ಕು ಪೊರಗಂ ನೋಡಲನುಮಾಡೆ
ಹರನೆಯ್ದೆ ಕಂಡು ಹೋ ಹೋ ಮಗನೆ ನಿನ್ನೋಡೆ
ಪುರ ಉರಿದು ಜರಿದು ಧರೆಯುರಿವುದಿನ್ನೆಲೆ ಮಗನೆ
ನರರೋರ್ವರುಳಿಯದಂತಪ್ಪುದಿನ್ನೆಲೆ ಮಗನೆ
ಬೇಡೈಯ್ಯ ಬೇಡೆಂದು ಘುಡಿಘುಡಿಪ ಭಾಳಕ್ಕೆ
ನೋಡೆ ಶಿವನಂದು ನಂದಿಯ ಮೊಗವಡವನಿಕ್ಕೆ
ಗವಸಣಕೆಗವಿದ ಕಾಲಾಗ್ನಿಯಂದದೊಳಿರ್ದು
ಶಿವನ ಮುಂದಪ್ರತಿಹತ ಪ್ರಭಾವದೊಳಿರ್ದು
ಕೋಪಮಂ ಮೆಲ್ಲನೊಳಗೊಳಗೆ ಕಾಣಿಸಿಕೊಂಡು
ಆ ಪರಮ ನಿರುಪಮಂ ಶಾಂತತೆಯನೊಳಕೊಂಡು

ದೇವ ಎನಗೊಂದು ನಾಮವನಿಡುವುದೆಲೆ ತಂದೆ
ಗೋವಿಂದನೆಂಬ ನಾಮಕ್ಕಾರೆನೆಲೆ ತಂದೆ
ಎನಗೆ ಎನ್ನಯ ಸತಿಗೆಯೊಂದು ಪೆಸರಂ ಕೊಟ್ಟು
ತನಿ ನೇಹದಿಂ ನಿಮ್ಮ ಕರುಣಮಂ ಮುಂದಿಟ್ಟು
ಕರುಣಿಸುವುದೆನೆ ಹರಂ ಮಗನನಪ್ಪುತ್ತಲ್ಲಿ
ಸುರಿವಶ್ರು ಜಲದಿಂದೆ ನೆನೆದು ನೋಡುತ್ತಲ್ಲಿ
ಎನ್ನಂತೆ ಎನ್ನ ಪೆಸರಾಗಿ ಜಗದೋಳ್ಮೆರೆದು
ಉನ್ನತ ವಿಲೋಚನಂ ಸಾಮರ್ಥ್ಯಮುಮನರಿದು
ಧರೆಗೆ ಶಂಕರದಾಸಿಮಯ್ಯನಾಗಿರು ಮಗನೆ
ಶರಣೆ ಶಿವದಾಸಿಯಾಗಿರ್ಕೆ ನಿನಗೆಲೆ ಮಗನೆ
ಎಂದು ಕರುಣಿಸಿಕೊಟ್ಟು ಲಿಂಗದೊಳ್ಪುಗಲಲ್ಲಿ

ಇಂದುಧರನಾಜ್ಞೆಯಂ ಕೈಕೊಂಡು ನಿಲಲಲ್ಲಿ
ಉಗ್ರನಸಮಗ್ರ ಪ್ರತಾಪರೂಪಿನ ತೆರದಿ
ಉಗ್ರಲೋಚನನ ಪುರಹರನ ಕೀರ್ತಿಯ ತೆರದಿ
ಹೊಸಮಸೆ ತ್ರಿಶೂಲಕ್ಕೆ ನೊಸಲಕಣ್ಣೊಗೆದಂತೆ
ಅಸಮನಯನಕ್ಕೆ ಕರ ಚರಣ ಒಲ್ದೊಗೆದಂತೆ
ಸಿಡಿಲ ಸಂಗಡಕೆ ಬರಸಿಡಿಲೊಡಂಬಡುವಂತೆ
ಮೃಡನ ಸಾಮರ್ಥ್ಯಕ್ಕೆ ಕಣ್ದೆರವೆಯಾದಂತೆ
ತರಣಿ ಬಿಂಜದ ಹಿಂಡು ನೊಸಲ ಮರೆಪೊಕ್ಕಂತೆ
ಉರಿವಗ್ನಿ ಹೆರೆ ನೊಸಲ ಹಸೆ ಏರಿ ನಿಂದಂತೆ
ವಡಬಾಗ್ನಿ ದಾವಾಗ್ನಿ ಸಂಗಡಂಗೊಂಡಂತೆ
ಕಡುಪಿನಿಂ ಕಾಲಾಗ್ನಿ ಹಣೆಗೊಂಡು ನಿಂದಂತೆ
ಮುಗಿಲ ಮರೆಯೊಳ್ಮೇಘಪಾವಕಂ ನಿಂದಂತೆ
ಬಗೆಯೊಳರಿವಿನ ಮರೆಯ ನಿಜದ ಬೆಳಗಿರ್ಪಂತೆ
ಮೆರೆವ ನಂದಿಯ ಮೊಗವಡದ ಮರೆಯ ಕಣ್ಣಿಪ್ಪೆ
ಕರೆಗೊರಲನಾಜ್ಞೆ ಮುಸುಕಿದ ನೊಸಲ ಕಣ್ಣೊಪ್ಪೆ
ಇಂತು ಶಂಕರದಾಸಿಮಯ್ಯನೊಪ್ಪುತ್ತಮಿರೆ
ಸಂತತ ಮಯೂರಪುರದೊಳಗೆ ಒಪ್ಪುತ್ತಮಿರೆ

ಪ್ರಥಮಸ್ಥಲ ಸಮಾಪ್ತ.

---



## ದ್ವಿತೀಯಸ್ಥಲ.

ವೃತ್ತ:— ಪದಮಲಸೂರ್ಯನಂತೆ ಬಿಸಿಗಣ್ಣಿನ ಕೋಪದ ಪುಂಜದಂತೆ ಕಾ। ಹೊದವಿದ ತೇಜದಂತೆ ಯೊರೆಯುಚ್ಚಿದ ಶೂಲಿಯ ಖಡ್ಗದಂಡೆ ರ್ರಾ। ಗ್ರದ ನಿಜರೂಪಿನಂದದಿ ಭಯಂಕರ ಶಂಕರದಾಸಿಮೈಯ್ಯನೊ। ಪ್ಪಿದನತಿ ಭೀಕರಂ ನತಕೃಪಾಕರವೀರ ತಮೋ ದಿವಾಕರಂ ॥

ವಚನ:— ಇಂತೊಪ್ಪೆ ಜಡೆಯ ಶಂಕರನಂ ಕಂಡು ಭಕ್ತ್ಯಾವೃತವನುಂಡು ಪ್ರತಾಪಮಂ ಕೊಂಡು ನೊಸಲ ಕಣ್ಣಂ ಪಡೆದು ಪ್ರತಿವ್ಯಾದಿಗಳನೊಡೆದು ಪರಸಮಯದ ಗರ್ವಮಂ ಮುರಿದು ದುರಿತ ಕುಲಮಂ ಜಡಿದು ಭವ ವೃಕ್ಷಮಂ ಕಡಿದು ಪುಣ್ಯಪರಿಮಳಮಂ ಮುಡಿದು ನಂದಿಯ ಮೊಗವಾಡವಂ ಪಡೆದು ಉತ್ತಮಾಂಗದ ಶಿವಲಿಂಗದ ಸೊಬಗಂ ಜಡೆಗಳ ಬೆಡಂಗಂ ಭಾಳಾಂಬಕದ ಭಯಂಕರಂ ಸತ್ಯದ ಸಾರ್ವಭೌಮಂ ಸಾಹಿತ್ಯದ ಭೂಷಣನೆನಿಪ ಶಂಕರದಾಸಿಮಯ್ಯಂ ಶಂಕರಾನುಗ್ರಹನಿಶ್ಯಂಕಂ ಶೈವ ಪ್ರತಾಪತೇಜಃಪ್ರಭಾಕರ ಕಿರಣನಾಗಿ ರಂಗಮಂಟಪದೊಳ್ಬಿಜಯಂಗೆಯ್ದಿರೆ ಮಯೂರಪುರ ಜನಮುಂ ಪರಮಭಕ್ತರುಂ ಹರಕರುಣಮಾದುದನರಿದು ಭಾಳಲೋಚನಮಂ ಪಡೆದುದ ಕಂಡು ಪುರದೋಳ್ಮೆರೆಯಿಸಿ ತಮ್ಮ ನಿಳಯಂಗಳ್ಗೆ ಬಿಜಯಂಗೈಸಿ ಧನಧಾನ್ಯಮಂ ದುಕೂಲಮಂ ತಂದಾರಾಧಿಸಲು

ಇವೆಲ್ಲವನೊಲ್ಲೆಂ ಯಾಯಾವರಂ ತಕ್ಕುದ ತಂದು ಜಡೆಯ ಶಂಕರಂಗಿತ್ತು ಪ್ರಸಾದಮಂ ಕೊಂಡು ಸುಖದೊಳಿರ್ಪುದಲ್ಲದೆ ಪರರರ್ಥಮಂ ಹೊದ್ದುವ ಸಿರಿಯತನಂ ಬೇಡ. ಆರಾಧಿಸಿಕೊಳ್ವೆಂಬ ಭಾರಕ್ಕಾನಾರೆನೆಂದೊಲ್ಲದೆ ಧೈರ್ಯನಿಧಿ ಮಾಯಾನಿರಹರಣಂ ನಿತ್ಯತೃಪ್ತಂ ಭಕ್ತಿಯಂ ಬೀರದೆ ಶಿವನೊಲವಂ ತೋರದೆ ಸಂಸಾರಮಂ ನಟಿಯಿಸಲೆಂದೊಂದು ಮನೆಯೊಳ್ಧಾನ್ಯಮಂ ತರಲೆಂದು ನಡೆತಂದು ಧಾನ್ಯಮಂ ಬೇಡೆ ಕೇಳ್ದಾ ಮನೆಯ ಪರ್ಜೋಳವಿಲ್ಲದೆ ಶಂಕರಗಂಡಂ ಸಿರಿದೈಯ್ಯಾ ಪಿರಿದೆಂದು ನುಡಿಯೆ ಜೋಳದ ಪೆಸರ್ಶಂಕರಗಂಡನ ಪೆಸರೆ ಮುನ್ನರಿಯೆನರಿಯೆಂ ನಿನ್ನೊಲ್ಲೆನೊಲ್ಲೆಂ ಶಂಕರನ ಪೆಸರ್ಗೆ ಶರಣೆಂಬುದಿಂತು ಮಾಡಲಾಗದೆಂದು ಭಯಭಕ್ತಿಭರಿತಂ ಶಿವಲಿಂಗನಿಷ್ಠಂ ಶಂಕರನಾಮ ದಶಾವಸ್ಥಂ

ನಡನಡುಗಿ ಜಡೆಯಶಂಕರನಲ್ಲಿಗೈತಂದೆಲೆ ದೇವ ದೇವ ಚಂದ್ರಧರ ಸಕಲ
ಸಸ್ಯಾಧಿಪತಿಯೆ ಜೋಳದ ಪೆಸರುಂ ನಿನ್ನ ಪೆಸರಾಗಿರ್ದಪುದು ಎನಗ
ರಿದೆಂದು ಕೇಳೆ ವಾಳಿಯುವನಲ್ಲದೆ ಜೋಳವಾಳಿಯುವನಲ್ಲಿಲ್ಲ ದೇವ ಇಂದು
ಮೊದಲ್ಗೊಂಡು ಧಾನ್ಯಮಂ ತರ್ಪುದೆನ್ನಿಂದಾಗದೆಲೆ ದೇವ ಎನೆ ಪನ್ನ
ಗಾಭರಣಂ ನೀನೊಲ್ಲುಂತೆನ್ನಂ ಸಲುಹುವುದೆಂದು ಬಿನ್ನೈಸೆ ತನ್ನಣುಗನ
ನಿಷ್ಠೆಗೆ ಲೋಕೈಕನಾಥಂ ಸಾಕಾರ ಸುಧಾವರುಷಂ ಹರುಷಪುಳಕಿತ
ನಾಗಿ ಎಲೆ ಮಗನೆ ನಿಶ್ಶಂಕ ಶಂಕರದಾಸಿಮಯ್ಯ ನೀನೊಲ್ಲದೋಗರಂ
ನಮಗೇಕೆ ನಿನಗೆ ಸುಖವಾಗಿರ್ಪ ಲೋಕವಿರೋಧವಾಗಿರ್ಪ ಲೋಳಿಸ
ರದ ಹಳುಕುಮಂ ಜೀರ್ಣಚೂರ್ಣಮಂ ಗುಂಜಾಸುಬೀಜಮನೊಂದು
ಗೂಡಿ ಅರೆದು ಎಮಗಿತ್ತುದಂದಿಂಗೆ ಪ್ರಸಾದಮಂ ಕೈಕೊಂಡು ನಿತ್ಯ
ತೃಪ್ತತೆಯನೊಳಕೊಂಡು ಪ್ರಸಾದ ಪಥ್ಯ ಹೃದಯನಾಗಿ ಸುಖದೊಳಿ
ರ್ಪುದೆಂದು ಯಾಯಾವರಕ್ಕೆ ಶಿವಾಲಯದೊಳ್ಪೊಟ್ಟಿರ್ದ ವಕ್ರಪಾದ
ನೆಂಬ ಭೃತ್ಯನಂ ಕರುಣಿಸಿಕೊಡಲೊಡಂ ಶಂಕರದಾಸಯ್ಯ ನೆನೆದ ಬಯಕೆ
ಮನವನಿಂಬುಗೊಂಡು ಗುಂಜಾದಿ ತ್ರಯ ವಿಷಕ್ರಿಯಾಯುಕ್ತಂ ಶಂಕರಾ
ರ್ಪಿತ ಪ್ರಸಾದ ಜೀವಿಯಾಗಿ ಸುಖತೃಪ್ತಿಯಿಂ ತೇಗಿ ಪರಿಣಾಮದಿಂ
ಬೀಗಿ ಜಡೆಯ ಶಂಕರನಿಂ ಶಂಕರದಾಸಂ ನೊಸಲಕಣ್ಣಂ ಪಡೆದನೆಂಬ
ಕೀರ್ತಿ ಲೋಕಪ್ರಸಿದ್ಧವಾಗೆ ತದ್ವಾರ್ತೆಯಂ ಕೇಳ್ದಿತ್ತ ಮುದನೂರೊಳು
ಜೇಡರ ದಾಸೈಯ್ಯಂ ರಾಮನಾಥ ಪ್ರಸಾದ ಸಗರ್ವಹೃದಯಂ ಶಿವನಿಂ ತವ
ನಿಧಿಯಂ ಪಡೆದೊಂದು ದಿವಸಂ ಶಿವನಂತೆ ಕೊಡುವರುಂ ಎನ್ನಂತೆ ಪಡೆ
ವರಿಲ್ಲೆಂಬ ಗರ್ವಂ ತನ್ನ ಮನದೊಳ್ಕೊಳೆಯೆ ಮನಸಿಜಹರನೀತನ
ಗರ್ವಮಂ ಕಂಡು ತನ್ನಿಂದಧಿಕನಂ ಕೊಂಡೊಯ್ದು ತೋರ್ಪೆನೆಂದು
ಶಿವಂ ಸರ್ವಜ್ಞಂ ನಿಜ ಶರಣ ಪ್ರಣಯ ಕಲಹ ಲೀಲಾಲೋಲಂ
ಕನಸಿನೊಳ್ಬಂದೆಲೆ ಮಗನೆ ಶಂಕರದಾಸಯ್ಯ ನೀನೊಂದೆಡೆಯೊಳಿರದೆ
ಸಮಸ್ತ ಶಿವಪುರಂಗಳಂ ಪೊಕ್ಕು ದಿವ್ಯ ಸ್ಥಾನಮಂ ಕಂಡು ಸದ್ಭಕ್ತರಂ
ನೋಡಿ ಸಾಮರ್ಥ್ಯಮಂ ತೋರಿ ಪ್ರತಾಪಮಂ ಬೀರಿ ಮರಳ್ದು ಬರ್ಪು
ದೆಂದು ಬೆಸಸಿ ಬಿಜಯಂಗೈಯ್ಯಲೆಚ್ಚತ್ತು ಕವಿತರ್ಪಾನಂದಾಶ್ರುಗಳುಮಂ
ಎತ್ತಿರ್ಪ ಪುಳಕಂಗಳುಂ ಎಂತಕ್ಕೆ ಸಂತೈಸಿಕೊಳುತ್ತಂ ಜಡೆಯ ಶಂಕ
ರನಂ ಬೀಳ್ಕೊಂಡು ಶಿವದಾಸಿಯುಂ ಪಿಂತಿಕ್ಕಿಕೊಂಡು ಗುಂಜಾದಿವಿಷ
ತ್ರಯುಂ ವಕ್ರಪಾದನ ಶಿರದೊಳಿಟ್ಟು ನವಿಲೆಯಿಂ ಪೊರಮಟ್ಟು ಒಡನೆ



ಬರ್ಪ ಹರಭಕ್ತರಂ ಮರಳಿ ಕಳುಪಿ ದಕ್ಷಾಧ್ವಿಷಂ ಕ್ಷುದ್ರದೈವ ವಿದ್ರಾ
ವಣಂ ಅನುಚಿತ ದೈವತಪನಂ ದರ್ಪಿತದೈವ ಧರಾಧರಪವಿ ದೈನ್ಯ
ದೈವಕೃಪಾಮೇರುವೆನಿಪ ಶಂಕರದಾಸೈಯ್ಯಂ ಪಶ್ಚಿಮಾಭಿಮುಖನಾಗಿ ನಡ
ತರುತಂ

ನೋಡಿದರ್ಗೆ ಶೈವಸಂಪದಮನೀವುತಂ ನುಡಿಸಿದರ್ಗೆ ಧರಣೀಶ್ವ
ರತ್ವಮಂ ಕರುಣಿಸುತ್ತುಂ ಮುಟ್ಟಿದ ಪ್ರಾಣಿಗಳುಂ ಸ್ವರ್ಗಕ್ಕೆ ಕಳುಪುತಂ
ಮುಟ್ಟಿದರಂ ಮುಕ್ತಿಗೆ ಕಳುಪುತಂ ಕೆಲವೆಡೆಗೈದು ಪಲವೂರ್ಗಳಂ ಕಳೆದು
ದಾಸನ ಮನದ ಗರ್ವಮಂ ಬಿಡಿಸಿ ತವನಿಧಿಯಂ ಪೇರ್ಚಿಸಲೆಂದು ಶಿವ
ಭಕ್ತಿಭೂಷಣರೆನಿಪ ಪುರಾತನರ ವೃದ್ಧಾಚಾರ ಭಕ್ತಿರಸಂ ಮಡುಗಟ್ಟಿ
ದಂತಿರ್ದ ಮುದನೂರ ಪುಗುತರ್ಪಾಗಳ್ ಮಗಧ ಮಾಳವ ವಂಗ
ಬಂಗಾಳ ತೆಲಗು ಗುರ್ಜರ ಮೊದಲಾದ ನಾನಾ ದೇಶಂಗಳ್ಗೆ ಪಿಡಿದು
ಪೋಪ ಹಿಂಡುಗೊಟ್ಟಿಗೆಯ ತಂಡಂಗಳಂ ತಲೆಹೊರೆಯ ಜನಂಗಳಂ
ಬಂಡಿಗಳೊತ್ತೊತ್ತಿಯಂ ದಾಸಂಗೀಶನಿತ್ತ ತವನಿಧಿಯ ಸಂಭ್ರಮದ ಸಂದ
ಣಿಗೆ ಮನದೊಳ್ಸಂತಸಂ ಬಡುತ್ತಂ ಮುದನೂರಂ ಪೊಕ್ಕು ರಾಮ
ನಾಥನಂ ಕಂಡೆರಗಿ ಆ ಶಿವಾಲಯದ ಹತ್ತಿರೆ ಬೀಡಾರಮಂ ಬಿಟ್ಟು
ಶಂಕರದಾಸಯ್ಯಂ ಪಥಶ್ರಮಭರನಾಗುತ್ತಲಿರೆ ಇದಂ ಕೇಳ್ದು ಜೇಡರ
ದಾಸೈಯ್ಯಂ ಬಂದು ಪೈಯ್ಯಿಕ್ಕಿ ಕೆಯ್ಯ ಮುಗಿದು ರವಿ ಹತ್ತಿರೆ ಚಂದ್ರಮಂ
ಕುಳ್ಳಿರ್ಪಂತೆ ಕೆಲದೊಳ್ಕುಳ್ಳಿರ್ದು ಶಿವಕಥಾಗೋಷ್ಠಿಯಿಂ ಕಿರಿದು ಪೊಳ್ತಂ
ಕಳೆದು ಹರುಷೋದಯರಾಗಿರ್ಪ ಸಮಯದೊಳ್ ಶಿವದಾಸಿಯರು ಎಲೆ
ಮಗನೆ ಧಾನ್ಯಕ್ಕೆ ಬಿಜಯಂಗೆಯ್ಯೆಂದು ವಕ್ರಪಾದಂಗೆ ಪೇಳಲಾ ಮಾತಂ
ಕೇಳ್ದು ಜೇಡರ ದಾಸೈಯ್ಯಂ ಶಿವಕಾರುಣ್ಯ ಸಗರ್ವಹೃದಯಂ ತವನಿಧಿಯುಂ
ಟೆಂಬ ಗರ್ವದಿಂ ಮುಂಗಾಣದೆ ಮೇಲನರಿಯದೆ ಶಿವಭಕ್ತಸಿರಿಯರ್ಗೆ
ಸಿರಿಯುಂಟೆಂಬುದನರಿಯದೆ ಶೀತಕರಂಗೆ ತಂಪನೀವಂತೆ ಭಾಸ್ಕರಂಗೆ
ಬೆಳಗಂ ಕುಡುವಂತೆ ವಹ್ನಿಗೆ ಉಷ್ಣಮಂ ಕುಡುವಂತೆ ಕೈಮುಗಿದು ದೇವ
ರಾರೋಗಣೆಗೆ ಧಾನ್ಯಮಂ ತರಸುಗಲೇಕೆ ಎನ್ನ ಮನೆಯೊಳ್ಸುಕುಮಾರ
ಧಾನ್ಯಮುಂಟು ಇಲ್ಲಿ ನೀವಿರ್ಪನ್ನೆವರಂ ಧಾನ್ಯಕ್ಕೆ ಪೋಗಲಾಗದು ನಿರೋ
ಧಂಬೇಡ ಹತ್ತು ಇಪ್ಪತ್ತು ಸಾವಿರ ನೆಲ್ಲಹೇರಂ ಕಳಿಪುವೆಂ ಅವಂ
ಕೈಕೊಳ್ವುದೆಂದು ಸ್ವಾಧೀನತೆ ಮಿಕ್ಕು ಸ್ನೇಹರಸದೊಡನೆ ಸಂಪನ್ನತೆ
ಗೂಡಿ ಬಿನ್ನಪಂಗೆಯ್ಯೆ ಶಂಕರಧ್ಯಾನಮನಿತುಬೇಗಂ ಮಾಣ್ದುಂಕುರಿಸಿದಾ

ಕ್ಷೇಪದ ಮೇಲೆ ಪಲ್ಲವಿಸಿದ ನಸುಗೋಪಂ ಬೆರಸಿ ಮುಗುಳ್ನಗೆ ಮೊಗ
ದೊಳಲರೆ ನೋಡಿ ನುಡಿದನಕ್ಕಕ್ಕ ಬಡ ಭಕ್ತರ್ಗೆಮಗೆ ನೆಲ್ಲಿಲ್ಲಿರ್ಪುದು
ವಿರಂಚಿಯ ವಕ್ತ್ರಮಂ ಚಿವುಂಟೆ ಮೃತ್ಯುವಿನ ಮನೆಯಂ ಮುತ್ತಿ ಹರಿಯ
ನೊಸಲರುಣ ಜಲಮಂ ಭಿಕ್ಷಾಪಾತ್ರೆಯೊಳ್ತೀವಿ ವಿಷ್ವಕ್ಸೇನನನಿಂದೆತ್ತಿ ತಿರಿ
ದಾಡಿದನ ಮಕ್ಕಳ್ಗೆ ಸಿರಿಯಲ್ಲಿಯುದೆಲೆ ದಾಸ ನೀಂ ಕೊಡುವವ ನಾಂ
ಕೊಳ್ವವನುಂಟುಂಟೆಂದು ನಸು ಕಟಕಿಯನಾಡುತ್ತೇಳ್ದು ಬಂದು ಬೀಡಾ
ರದ ಮನೆಯ ಮುಂದೊಪ್ಪುವ ತಿಪ್ಪೆಯನಾತಂ ತೆಗೆಯಿಸಿ ಪೊನ್ನ ಕಡ
ವರಂಗಳಂ ತೋರಿಸಿ ನಿನಗೆ ಬೇಕ್ಪನಿತಂ ಕೊಳ್ಳು ಕೊಳ್ಳೆಲೆ ದಾಸ ಕೊಳ್ಳೆ
ನುತ್ತ ನಿನ್ನ ನಾಲ್ವೆರಲ್ನೆಲ್ಲ ಜಳ್ಳಿಗೆ ತಕ್ಕ ಮುರುಕವಲ್ಲ ತವನಿಧಿಯಂ
ಕೊಟ್ಟ ದೇವಂ ತಾನೇ ಕೊಂಡಪಂ ನೀಂ ಪೋಗೆಂದು ಶಂಕರದಾಸೈಯ್ಯಂ
ಜಡಿದು ನುಡಿಯೆ

ಜೇಡರ ದಾಸಯ್ಯಂಗೆ ಭೀತಿ ಬಲಿದು ಬೆರಗು ರೂಪುಗೊಂಡು
ಕೌತುಕಂ ಪುಟ್ಟಿ ಚಾತಭಯಂ ಜಕ್ಕುಲಿಸಿ ಕಂದಿದ ರವಿಯಂತೆ ಕಳೆ
ಯೊಡೆದ ಚಂದ್ರನಂತೆ ಮರುಳಂತೆ ಮರೆದು ಶೂನ್ಯ ಹೃದಯನಾಗಿ
ನಿಂದಿರಲಮ್ಮದೆ ಮೆಲ್ಲಮೆಲ್ಲನೆ ನಿಜನಿಳಯದತ್ತ ಬರುತಿರ್ದ ದಾಸನಂ
ಕಂಡಿದೇನಿದೇನೊಳಗೆ ತವನಿಧಿ ಕವಲಾಯಿತ್ತು ಪೊರಗೆ ಭಕ್ತಿರಸಂ ಬರಿ
ದಾಯಿತ್ತು ಮುಖದ ನಯಂ ಹಾರಿತ್ತು ಕಣ್ಣುಗಳ ಕಾಂತಿ ಜಾರಿತು
ಸತ್ಯಶರಣರ ಕೂಡುತ್ತರಂಗೊಟ್ಟಿರೇಕೆ ಅಲ್ಲದಿರ್ದೊಡಿನಿತಾಗದೆಂದು ನುಡಿಯೆ
ದಾಸಂ ಕೇಳ್ದು ಶಿವಭಕ್ತಿಸಂಪನ್ನೆ ಅಗ್ಗಳದ ದುಗ್ಗಳೆ ನೀನೆಂದಂತೆ ಶಂಕರ
ದಾಸನೊಳ್ಸಲುಗೆಯಂ ಮಾಳ್ಪರೇ ನಮ್ಮ ಭಕ್ತಿ ಎನಿತು ನಾವೇತರವರು
ರಾಮನಾಥನಾ ಪೊಳ್ತೇನಂ ಮಾಡಿದಪನೆಂದಾರರಿವರು ಇಂತಿವಲ್ಲಲ್ಲ
ನಡೆಯೆಂದು ಸದ್ಭಕ್ತಿಗೂಡಿ ಶಾಂತಿಭೂಷಣೆ ಶಿವೈಕನಿಷ್ಠೆ ಏರಿ ಮೆಲ್ಲ
ಮೆಲ್ಲನಲ್ಲಿಂ ತೊಡಗಿ ಮೈಯಿಕ್ಕುತಂ ಬಂದು ಚಿತ್ತದಭಯಮಂ ಮನದ
ಲಲ್ಲೆಯುಮಂ ಮುಖದ ಕಾರ್ಪಣ್ಯಮುಂ ದಿಟ್ಟಿಯ ದೈನ್ಯಮುಂ ಬೆರಸಿ
ದಾಸಂ ಶಂಕರದಾಸೈಯ್ಯಗಳ ಪದತಳದೊಳ್ ಧೊಪ್ಪನೆ ಬೀಳ್ದು ದೇವಾ
ಶಿಸುವಿನೊಳ್ನೀತಿಯುಂಟೆ ಪಶುವಿನೊಳ್ಬುದ್ಧಿಯುಂಟೆ ಮತಿಹೀನಂಗೆ ಮನ್ನ
ಣೆಯುಂಟೆ ದೀನಂಗೆ ದಾಕ್ಷಿಣ್ಯಮುಂಟೆ ಕ್ಷೀಣಂಗೆ ಜಾಣ್ಮೆಯುಂಟೆ ಭಕ್ತಿ
ಇದ್ದೆಡೆಯೊಳ್ಭಯಮುಂಟೆ ಎನ್ನೊಳ್ಗುಣವನರಸುವರೆ ತೊಳ್ತನೊಳ್ತಪ್ಪನರ
ಸುವರೆ ಸತಿಯಪರಾಧಮಂ ಪತಿ ನಿರೀಕ್ಷಿಸುವರೆ ಕೃಪಾಸಮುದ್ರ ಕರುಣಿ



ಕರುಣಿಸುವುದೆಂದು ಮತ್ತೆ ಮತ್ತೆ ಸೈಗೆಡೆದು ಬೀಳ್ದ ದುಗ್ಗಳೆಯಂ ಶಿವ
ಭಕ್ತಿಭರಿತಂ ಕಿಂಕುರ್ವಾಣ ಭಕ್ತಿರಸದೊಳಗೆ ನೋಡಿ ದಾಸನ ಮೇಲಣ
ಮುನಿಸಂ ನಿಮಿಷದೊಳ್ಪೋಗೆ ಕರುಣಿಸಿ ಶಿರದ ಮೇಲೆ ಶ್ರೀಹಸ್ತಮ
ನಿಟ್ಟು ರಾಮನಾಥಂ ಕೊಟ್ಟಪಾರ ತವನಿಧಿಯುಂ ಒಳಗಣಿಂದ ತೆಗೆ
ತರ್ಪೆನೆಂಬ ಭ್ರಮೆಯಂ ಬಿಟ್ಟು ಇಂದು ಮೊದಲಾಗಿ ಮೇಲಣಿಂದುಕ್ಕುತ್ತಿ
ಬರಲೆಂದು ವರವಂ ಕೊಟ್ಟು ಅವರೀರ್ವರಂ ಕಳುಪೆ ನಿಜನಿಳಯಕ್ಕೆ
ಬಂದುಕ್ಕಿ ನೆಗೆವ ತವನಿಧಿಯಂ ಕಂಡು ದಾಸದುಗ್ಗಳೆಯರ್ಗೆ ಹರುಷಂ
ದಳವೇರಿ ಶಿವಭಕ್ತರ್ನೋಳ್ನಂಬುಗೆ ನೂರ್ಮಡಿಸಿ ನಿಜನಿಳಯದೊಳು
ಶಿವನಂ ಒಲೈಸುತ್ತಿರಲಿತ್ತ ರುದ್ರಾವತಾರನಪ್ಪ ಶಂಕರದಾಸೈಯ್ಯಂ ಗವ
ಸಣಿಗೆಗವಿಸಿದ ಪಾಶುಪತಾಸ್ತ್ರದಂತೆ ಮೊಗವಡದ ಮಹಿಮಂ ಸದಮಳ
ನಿಳಯಂ ಮುದನೂರೊಳಿರ್ದನತ್ತಲು

ಜಯಸಿಂಹರಾಯನಿರ್ಪ ಕಲ್ಯಾಣದೊಳುಂ ದರ್ಭೆಯ ನಿರ್ಭಾಗ್ಯರುಂ
ವೇದವಾದಿಗಳುಂ ಕೊಂಡೆಯರುಂ ತರ್ಕದ ತಾಮಸರುಂ ಯಜ್ಞದ
ಅಜ್ಞಾನಿಗಳುಂ ತಿಲದಾನದ ಕುಲಹೀನರುಂ ಮಹಿಷದಾನದ ಸಾಹಸಿ
ಗಳುಂ ಕಾಳಾಮುಖದಾನದ ದಾಳಿಕಾರರೆನಿಪ ದಾನಯಾಚಕರೆನಿಪ
ನೀಚರುಂ ನೆರೆದು ಬಂದರಸಂಗೆ ಆಶೀರ್ವಾದಮಂ ಕೊಟ್ಟು ಎಲೆ ದೇವ
ನವಿಲೆಯೊಳೋರ್ವ ಶಂಕರದಾಸೈಯ್ಯನೆಂಬಾತಂ ನೊಸಲಕಣ್ಣಂ ಪಡೆದು
ಪರದೈವ ಪ್ರತಿಮೆಗಳಂ ದಹಿಸುವ ಬಿರುದಿನ ಅತ್ಯಾಸುರಂ ಮಾಡಿ
ಕೊಂಡಿರ್ಪನೀಗಳ್ಮುದನೂರೊಳಿರ್ದಪನವನಂ ನಮ್ಮೂರ ತಮ್ಮಡಿಗಳ
ಕೂಡೆ ಕರೆಯಿಸಿ ಹಿರಣ್ಯಕಶ್ಯಪಮದಭಂಜನಂ ನಾರಸಿಂಹಂ ಬಾಯ್ದೆರೆ
ದಿರ್ದಪ ತನ್ಮೂರ್ತಿಯಂ ನೊಸಲಕಣ್ಣ ನೋಡಿಸಿ ಭಕ್ತರ ನುಡಿಯ
ಪೇರ್ಬುಸಿಯ ಪುಸಿಕಂಗಳಂ ನೋಡಲಕ್ಕುಮೆನೆ ಅರಸಂ ಕೇಳ್ದಾ ಮಾತಿಂಗೆ
ನರಿಯ ಗೀತಕ್ಕೆ ಬಳ್ಳು ತಲೆದೂಗಿದಂತೆ ತಲೆದೂಗುತ್ತಂ ಒಡಂಬಟ್ಟು
ತಲೆದೂಗಿ ಸತ್ಯ ಶರಣನಚ್ಚ ಸಾಮರ್ಥ್ಯವನರಿಯದ ಸ್ವಾಮಿದ್ರೋಹಿಗ
ಳೆಲ್ಲರ್ನೆರೆದು ಆ ಪಟ್ಟಣದ ತ್ರಿಪುರಾಂತಕ ದೇವರ ಸ್ಥಾನಿಕರಂ ಕರೆಯಿಸಿ
ನೀವಿಂದು ಪೋಗಿ ಮುದನೂರೊಳಿರ್ದ ಶಂಕರದಾಸಯ್ಯನಂ ಒಡ
ಗೊಂಡು ಬನ್ನಿರೆಂದರಸಂ ಪೇಳೆ ಕೇಳ್ದು ತಮ್ಮಡಿಗಳ್ಮುದನೂರ್ಗೆ ಬಂದು
ಸತ್ಯಶರಣನಂ ಕಂಡು ದೇವ ದೇವ ಕಲ್ಯಾಣದ ತ್ರಿಪುರಾಂತಕ ದೇವರೇ

ಮೊದಲಾದ ಮಹಾಸ್ಥಾನಂಗಳಂ ಕಂಡು ಶಿವಭಕ್ತರಂ ನೋಡಲ್ಬಿಜಯಂಗೈವುದೆಂದು ಪೇಳಲೊಡಂಬಟ್ಟು,

ಭಕ್ತಜನವೇಷ್ಟಿತಂ ಶಂಕರದಾಸಯ್ಯಂ ನರಸಿಂಹೋಪಸಂಹಾರಕ್ಕೆ ಪೊರಮಡುವ ಶರಭದೇವನಂತೆ ಪೊರಮಟ್ಟು ನಡೆದುಬಂದು ಕಲ್ಯಾಣಮಂ ಪುಗುತಪ್ಪಾಗಳ್ ಜಯಸಿಂಹರಾಯಂ ಹಸ್ತ್ಯಶ್ವರಥಪದಾತಿಗಳಿಂ ಛತ್ರಚಾಮರ ಕಳಶ ಕನ್ನಡಿಗಳಿಂದಿದಿರ್ಗೊಳೆ ಪಟ್ಟಣಮಂ ಪೊಕ್ಕು ಶರಣರ ನಿಳಯದೊಳು ಬಿಜಯಂಗೈದು ಶರಣಕುಲ ಸಂಭಾಷಿತ ಶಿವಪುರಾಣ ಶಿವಕಥಾಮೃತ ರಸದೊಳವಗಾಹಂಗೈದು ವಿಕಸಿತ ಹೃದಯಕಮಲನಾಗುತ್ತೊಂದೆರಡು ದಿನವಿರಲಲ್ಲಿಗೆ,

ಜಯಸಿಂಹರಾಯಂ ಕ್ಷುದ್ರಮಂತ್ರಾಳೋಚನೆಯಂ ಮಾಡಿ ಪ್ರಧಾನಿಗಳಂ ಕೂಡಿಕೊಂಡು ಬಂದು ಶಂಕರ ದಾಸಯ್ಯಗಳಿಗೆ ಕೆಯ್ಯಂ ಮುಗಿದು ದೇವ ಶಿವದೇವ ಸ್ಥಾನಂಗಳಂ ನೋಡಲ್ಬಿಜಯಂಗೈವುದೆಂದು ತಾನೇಳ್ದು ಕೈಗೊಟ್ಟು ನಡೆತಂದು ಪಲವು ಲಿಂಗಂಗಳಂ ಭರದಿಂ ತೋರುತ್ತಂ ಬಪ್ಪಾಗಳ್ಮುಂದೆ ಸುವರ್ಣ ಖಚಿತವಾಗಿ ಕೋಳಿಯ ಗೂಡಿನಂತಿರ್ದ ವಿಷ್ಣುಗೃಹದೋಳ್ನಿಂದು ದೇವಕಳಾಸಾನ್ನಿಧ್ಯವಹ ನೃಸಿಂಹ ಪ್ರತಿಮೆಯಂ ನಿಮ್ಮ ನೊಸಲಗಣ್ಣಿಂ ನೋಡಲು ಘನ ಪ್ರತಿಷ್ಠೆಯಾದಪುದು, ನೋಡಿ ಕರುಣಿಸಿಮೆನೆ ಶಂಕರ ದಾಸಯ್ಯಂಗಳರಿದಯ್ಯೋ ಶರಭದೇವರ ಕೆಯ್ಯೋಳ್ನುಚ್ಚು ನೂರಾದವನಡಿಗಡಿಗೆ ಕಾಡಲೇಕೆ? ನೋಡಿದ ಪ್ರತಿಮೆಗಳ್ಗಳಿವಕ್ಕು. ನಿಮಗೆ ನಿರೊಧಂಬಕ್ಕುಂ. ಬೇಡ ಬೇಡಕಟ ಪ್ರಾಣಿಗಳ ಮನವ ನೋಯಿಸಲೇಕಯ್ಯ ಬೇಡೆಂದು ಸುಮ್ಮನಿರೆ, ಮತ್ತೆ ಮೆಯ್ಯಿಕ್ಕಿ ನಿಮ್ಮಡಿಗಳ್ನೋಡಿದೊಡಳಿವುಂಟೆ, ಸುಪ್ರತಿಷ್ಠಮಕ್ಕೆಂದಾಕ್ಷೇಪದಿಂ ಪರಿಹಾಸ್ಯವನಾಡೆ, ಆ ಕಟಕಿಯಂ ಕೇಳಲಾರದೆ ಚಿತ್ತದೊಳ್ ಘೂರ್ಮಿಸಿ ಅಹಂಕಾರದೊಳ್ಸಡಗರಿಸಿ ಬುದ್ಧಿಯೋಳ್ಬಲಿದು ಮನದೋಳ್ಮುಳಿದು ಕೋಪದೋಳ್ಮುಸುಂಕಿ ಅದ್ಭುತ ರಸದೊಳಂಕುರಿಸಿ ರೌದ್ರದೋಳ್ಕ್ರೋಧಿಸಿ ಭಯಾನಕದೊಳ್ಭಾವಿಸಿ ಗಂಭೀರದೋಳ್ಘುಳಿಘುಳಿಸಿ ವೀರದೊಳ್ಗಜರಿ ವಿಕ್ರಮದೋಳ್ಗರ್ಜಿಸಿ ಬರಸಿಡಿಲ ಗವಸಣಿಕೆದೆಗೆವಂತೆ ಕಡೆಗಾಲದ ಕಿಚ್ಚಿನ ಮುಚ್ಚುಳ್ದೆರೆವಂತೆ ನಂದಿಯ ಮೊಗವಡವನೊಯ್ಯನೊಯ್ಯ ನೋಸರಿಸಲೊಡಂ ಬಿಸಿಗಣ್ಣಿನೊಳಗೆ ಘುಳುಘುಳಿಸಿ ಸೂಸಿದು ಧಗಿಲ್ಭುಗಿಲೆಂದು ಭೋಂಕೆನೆ ನೆಗೆದು ಮುಂಗಾಣಿಸಿ ಪರಿದು ನೃಸಿಂಹ ಪ್ರತಿಮೆಯಂ ನೆರೆದುರುಪೆ ನೃಕೇ



ಸರಿಯು ಘುರಿಘುರಿಲನುರಿದು ಬಾಯಿ ಹುರಿಹಂಚಾಗಿ ಕೋರೆದಾಡೆ ನೆರೆ ಬಿರಿದು ನಿಡುನಾಲಿಗೆ ಸೆಕ್ಕನೆ ಸೀಳ್ದು ಬಿಡುಗಣ್ಗಳೊಡೆದು ಹಾರಿ ಮೃಗವದನಂ ಭುಗಿಲೆಂದು ನಖದ ಕೈ ನೆರೆ ಸೀದು ಕರಿಮುರಿಯಾಗಿ ಸರ್ವಾಂಗಂಗಳರಳ್ದು ಫಳಫಳನೆ ಕಳಲ್ದು ಬಿರ್ಚಿ ಬೇರಾಗಿ ಅರಗಿನ ರೂಪನುರಿಯ ಕೊನೆ ಪತ್ತಿದಂತಾಗೆ ಬಾದುಮಯ್ಯನ ಮೆಯ್ಯಂಬರ ಸಿಡಿಲು ಪೊಡೆದಂತಾಗೆ ನೃಸಿಂಹ ಪ್ರತಿಮೆ ಧರೆಯ ಮೇಲುರುಳೆ,

ಜಯಸಿಂಹರಾಯನುಂ ವೈಷ್ಣವರುಂ ವಾದಿಗಳುಂ ಉರಿದು ಮೊಗಹುಗೆಡೆ ಪರಸಮಯಿಗಳ್ಮೊರೆಯಿಟ್ಟು ಹಲ್ಲಂ ಕಿರಿದು ಹುಲ್ಲಂ ಕರ್ಚಿ ದೇವ ರುದ್ರಾವತಾರನೆಂದರಿಯದೆ ಮರೆದು ಮರುಳಾದ ಸರ್ವಾಪರಾಧಿಗಳು ದೇವ ಉಗ್ರಲೋಚನವಂ ಮುಸುಂಕು ಮುಚ್ಚುಳಿಕ್ಕೆಂದು ಚರಣದೊಳ್ ಸೈಗೆಡೆದು ಪಟ್ಟಿರ್ದೊರಲ್ದು ಮೇಲನರಿಯದ ಬಾಲಕರ್ಗೆ ಪಿರಿಯರನರಿಯದ ನರಗುರಿಗಳ್ಗೆ ನಿತ್ಯರನರಿಯದನಿತ್ಯರಂ ಕಾವುದೆಂದು ಕಿಂಕುರ್ವಾಣಮಂ ತೋರೆ ಶಂಕರದಾಸಯ್ಯಂ ಕರುಣಿಸಿ ನೋಡಿ ನಂದಿಯ ಮೊಗವಡಮಂ ಮುಸುಂಕಿ ಜಯಸಿಂಹರಾಯಂಗಭಯಮಂ ಕೊಟ್ಟು ನಿಜನಿಳಯಮಂ ಪೊಕ್ಕು ಪುರಹರನ ಪ್ರತಾಪರೂಪಂ ನರಸಿಂಹಪ್ರತಿಮಾವಿಭಾಕರನುಂ ನರಲೋಕ ವೀರಭದ್ರನುಂ ಸತ್ಯನಿಳಯಂ ಶರಣರೊಡಗೂಡಿ ಶಂಕರಾರೋಹಣಮನೋತರಂಗ ಸಮುಲ್ಲಸಿತ ಸಿತಹೃತ್ಕಮಲಂ ಕಲ್ಯಾಣದೊಳಿರೆಯಿರೆ.

**ದ್ವಿತೀಯಸ್ಥಲ ಸಮಾಪ್ತ.**

## ತೃತೀಯಸ್ಥಲ.

ವೃತ್ತ॥—ಅರಿಯದೆ ಮೋಘವಹ್ನಿಗಿದಿರಾದ ನರಂಗೆ ಹುತಾಶನಾರ್ಚಿಗಂ
ತರಗೆಲೆಯಾಗುತಿರ್ದವೆನಿಸುಂ ಸಲೆ ಶಂಕರದಾಸಿಮಯ್ಯನಂ
ಮೆರೆದ ಮಹೇಶನಂ ನಿಟಲ ಲೋಚನನಂ ಶಿವತತ್ತ್ವರೂಪನಂ
ಮರೆಯದೆ ನಿಚ್ಚ ಲೋಲೈಸುತೊಪ್ಪಿದನಾ ಜಯಸಿಂಹ ಭೂಭುಜಂ ॥

### ರಗಳೆ.

ಇಂತು ಜಯಸಿಂಹನೃಪನೋಲೈಸುತಿರಲಲ್ಲಿ
ಮುಂತೆ ಶಂಕರದಾಸಿಮಯ್ಯನೊಪ್ಪುತ್ತಲ್ಲಿ
ನೆನೆದನಾ ಜಡೆಯ ಶಂಕರದೇವನಂಘ್ರಿಯಂ
ನೆನೆವರಭಿಮತವೀವ ಕಾರುಣ್ಯವಾರ್ಧಿಯಂ
ನೆನೆದು ಪೊರಮಟ್ಟನಾ ಶಿವಭಕ್ತರೊಡನೆ ಬರೆ
ಮನವೊಸೆದು ಜಯಸಿಂಹರಾಯನೋಲೈಸಿ ಬರೆ
ಬಂದರಸನಂ ಶರಣ ಸಂದೋಹಮುಂ ಕಳಿಪಿ
ಸಂದಣಿಪ ಪರದೈವ ಕುಲದ ಗರ್ವವನಿಳಿಪಿ
ಶಿವದಾಸಿಗಳ್ಪಿಂತೆ ಪಿಂತೆ ನಡೆತರುತಿರಲು
ಶಿವನಿತ್ತ ವಕ್ರಪಾದಂ ಮುಂದೆ ಬರುತಿರಲು

ಶೈವಾಂಬುವಾರ್ಧಿವರ್ಧನ ವಿಮಲಚಂದ್ರಮಂ
ಶೈವ ಕುಲಗಗನ ಧವಳಿಪ ದಿನಪವಿಭ್ರಮಂ
ವೃಷಭೇಂದ್ರ ಮುದ್ರಿತ ಲಲಾಟೇಕ್ಷಣಾಂಕಿತಂ
ದಶದಿಗಂತ ಪ್ರಸಿದ್ಧ ಪ್ರತಾಪಾನ್ವಿತಂ
ಹರಭಕ್ತಿ ಭೂಷಣಂ ಪರಸಮಯ ಭೀಷಣಂ
ನರಹರಿ ಪ್ರತಿಮಾ ಮದ ಪ್ರಖರ ಶೋಷಣಂ
ನಡೆತಂದನಮ್ಮಮ್ಮ ನೆರೆ ಮನದ ನಿಶ್ಚಳಂ
ನಡೆತಂದನೆಲೆಲೆ ಪರಸಮಯ ಕೋಳಾಹಳಂ
ಬರುತಂ ಬಳಲ್ದು ಪೆಂಬೇರಿ ಪೊರಗೆಸೆದಿರ್ಪ
ನರರು ಕೊಂಡಾಡುವಾ ಮೈಲಾರನೊಪ್ಪಿರ್ಪ



ಮಾಳಿಗೆಯ ಕೆಲದ ಪಾಸಿನ ಮೇಲೆ ಕುಳ್ಳಿರ್ದು
ಮೈಳುಗನ ನಡೆವುತಂ ತಾಗುತಂ ಕುಳ್ಳಿರ್ದು
ಸುಟ್ಟುರುಪದಿಂದೆನ್ನನಡಸಿದಂ ಬರ್ದುಕಿದೆಂ
ಮುಟ್ಟಬಾರದ ಮಹಿಮನಂಘ್ರಿಯಂ ಸೋಂಕಿದೆಂ
ಎಂದಾಗಳಾ ಪ್ರತಿಮೆ ಬರ್ದುಕಿದೆನೆನುತಮಿರೆ
ನಿಂದವರು ಕರುಣಮುಂ ಪಾರುತಂ ನಡುಗುತಿರೆ
ಅಂದು ಶಂಕರದಾಸಿಮಯ್ಯನೊಪ್ಪುತ್ತಮಿರೆ
ಮುಂದೆ ನಲವಿಂ ವಕ್ರಪಾದ ಕುಳ್ಳಿರುತಮಿರೆ

ಬಂದಳೋರ್ವಳ್ವನಿತೆ ದಂಡಿಗೆಯ ಪನ್ನಗದ
ಸಂದಣಿಪ ವೀರಧೀರರ ಸತಿಯರೊತ್ತರದ
ಪೆಂಬೇರ ಪಟ್ಟಣದ ಸೊಬಗಿನಗ್ಗದ ವನಿತೆ
ಇಂಬಿನಿಂ ಮೆರೆವ ಮೈಲಾರದೇವಿ ರಾಗಿಸುತೆ
ಸಂದಣಿಪ ಹರುಷದಿಂದಂದಣಮನಿಳಿತರುತೆ
ಬಂದೊಳಗೆ ಪುಗಲಮ್ಮದಲ್ಲಿ ಪೊರಗೆಯೆ ನಿಲುತೆ
ಮುಂದೆ ಶಂಕರದಾಸಿಮಯ್ಯನಿರುತಿರೆ ಕಂಡು
ಎಂದಳಾ ಸತಿಯವರ್ಗೆ ನೀವಿದಂ ಕೈಕೊಂಡು
ಅಯ್ಯ ಪೂದಂಬುಲವನೇರಿಸಿರೆ ಮೈಲಂಗೆ
ಕಯ್ಯಾರೆ ಮಾಡಿರೇ ವರವೀವ ಮೈಲಂಗೆ
ಎನುತಲ್ಲಿ ವೀಳೆಯಮುಮಂ ಕರ್ಪುರಂಗಳಂ
ಕೊನೆಯುರಳ ಮಲ್ಲಿಗೆಯ ಸಂಪಿಗೆಯ ನನೆಗಳಂ
ನೀಡಿದಳ್ ಹರವೇಷವೆಂದರಿಯದಾತಂಗೆ
ನೀಡಿದಳ್ ಹರಗೆ ಶಂಕರದಾಸಿಮಯ್ಯಂಗೆ
ಕೊಡಲೀಸಿಕೊಂಡವಂ ಶಂಕರಂಗರ್ಪಿಸುತೆ
ಮೃಡನ ಪ್ರಸಾದಮಂ ಲೀಲೆಯಿಂ ಕೈಕೊಳುತೆ
ಗಂಧಮಂ ಕಕ್ಷ ವಕ್ಷಸ್ಥಳಕೆ ಪೂಸುತಂ
ಬಂಧುರ ಪ್ರಸವಮಂ ಮಕುಟದೋಳ್ಸುತ್ತುತಂ
ವೀಳೆಯಮನಲ್ಲಿ ನಲವಿಂದೆ ಕೈಕೊಳುತಮಿರೆ
ಮೈಳಯಗೆ ಕೊಡದೆ ತಾನೇ ಭೋಗಿಸುತ್ತಮಿರೆ

ಕಂಡದಂ ರಮಣಿ ಮಿಗೆ ಕೋಪಿಸುತೆ ತಾಪಿಸುತೆ
ಕೊಂಡಿರಿಂತಿದನು ಮೈಲಾರಂಗೆ ನೇಮಿಸುತೆ
ಎಲೆಯಯ್ಯ ಮೈಲಂಗೆ ಕೊಡದೆ ನೀಂ ಕೊಂಬರೇ
ಒಲವಿಂದೆ ಮೂವಂಬುಲವನಿಕ್ಕದಿರ್ಪರೇ
ಎಂದು ಮೈಲಾದೇವಿ ನಿಂದಾಗ ಸಖಿಯರುಂ
ನೊಂದು ಮನವಳಿದು ಮೈಲೆಯಗಂಜುತೆಲ್ಲರುಂ
ಸಾರೆ ಮೈಲಯ್ಯನತ್ಯುಗ್ರನೆಂದೆನುತಮಿರೆ
ಮೀರಿ ಶಂಕರದಾಸಿಮಯ್ಯನಂ ನುಡಿವುತಿರೆ

ನಸುನಗುತ್ತಲಿರ್ದಾ ಭವಿಗಳಂ ನೆರೆ ನೋಡಿ
ಒಸೆದು ಕಾರುಣ್ಯದಿಂ ಪ್ರತಿಮೆಯಂ ನೆರೆ ನೋಡಿ
ಪಿಡಿಯೊರ್ಮೆ ಬಾರೆಲವೊ ತಂಬುಲವನೆನುತಲ್ಲಿ
ಕೊಡಿ ಯೆನುತೆ ನಡುಗಿ ಮೈಯ್ಯಿಕ್ಕಸ್ಕತಂ ಬೀಳ್ದಲ್ಲಿ
ಕೆಯ್ಯೊಡ್ಡಿ ತಂಬುಲವ ಕೊಂಡು ಸವಿದಂ ನಲಿದು
ಮೆಯ್ಯೊಳಗೆ ಪೂಸಿಕೊಂಡಾನಂದದಿಂ ನಲಿದು
ನಿಂದಿರಲ್ಬಂದವರು ಬೆದರಿ ಬೆಬ್ಬಳಿವೋಗಿ
ಮುಂದುಗೆಟ್ಟರಿವುಗೆಟ್ಟತಿಭಯಾನತರಾಗಿ
ಎಡಹುತಂ ತಾಗುತಂ ನಡೆಗೊಂಡು ಪರಿತಂದು
ಕಡುಭೀತಿಯಿಂದೆ ಪುರಜನಕೆ ಪೇಳುತ್ತಂದು
ಏನೆಂದು ಪೇಳ್ವೆವಿದನೀ ಧರೆಗೆ ಪೊಸತಾಯ್ತು.
ಏನೆಂದು ನುಡಿದಪೆವು ಕಣ್ಗೆ ಕೌತುಕವಾಯ್ತು
ನಮ್ಮ ಮೈಲಾರದೇವಂಗೀಗಳಿಂತೋರ್ವ
ತಮ್ಮಡಿ ಬರುತ್ತಿರ್ದನತಿ ಗರ್ವದಿಂದೋರ್ವ
ನಿಂದು ತನ್ನಯ ಬಾಯ ತಂಬುಲವನಿಕ್ಕಿದಂ
ಕುಂದಿತ್ತು ಮೈಲುಗನ ಸಾಮರ್ಥ್ಯ ಸಂಪದಂ
ಮೈಲಾರನೆಲ್ಲರೆಂಜಲ ತಿಂಬ ತೆರನಾಯ್ತು
ಮೈಲಾರನೊಳಗೆ ದೂಷಣೆಯೆಂಬುದಿಂತಾಯ್ತು
ಇನ್ನೇಕೆ ಮೈಲಾರನೊಪ್ಪದಿಂ ಪೂಜಿಪುದು
ಇನ್ನೇಕೆ ಹಾಳಾದ ದೂಳವಿಯ ಪೂಜಿಪುದು



ಎನೆ ಕೇಳ್ದು ಪೆಂಜೇರ ಜನವೆಲ್ಲ ನಡೆತಂದು
ತಮತಮಗೆ ಚೋದ್ಯಮಂ ನೋಡಲೆಂದೈತಂದು
ಅರರೆ ಶಂಕರದಾಸಿಮಯ್ಯನೊಲವಿಂದಂದು
ಇರದೆ ಪೋಗಲ್ವೇಳ್ಕು ಮೆಂದಾಗ ಮನದಂದು
ಅಲ್ಲಿಂದೆ ಪೋಗಲೆಂದಾಗಲುದ್ಯೋಗಿಸುತೆ
ಮೆಲ್ಲನೇಳುತ್ತೆ ಹರನಂ ನೆನೆದು ಸಾಗಿಸುತೆ
ಕೊಡೆವಿಡಿದು ಬಾರೆಂದು ಕರುಣದಿಂ ಬೆಸಸುತಿರೆ
ನಡೆತರುತೆ ವಕ್ರಪಾದಂಗೆ ಬೆಸಸುತ್ತಮಿರೆ
ತನಗೆ ಬೆಸಸಿದರೆಂದು ಮೈಲಾರನೊಲ್ದೇಳ್ದು
ಮನದೊಳಗೆ ಬದುಂಕಿದೆನೆನುತ್ತೆ ಸುಖಮಂ ತಾಳ್ದು
ನಡೆದು ಶಂಕರದಾಸಿಮಯ್ಯಂಗಳೊಡನೊಡನೆ
ಕಡು ಭಕ್ತ ಮೈಲಾರ ಕೊಡೆವಿಡಿದು ಬರಲೊಡನೆ
ಲೋಕವರ್ಚಿಸುವ ಮೈಲಾರ ಕೊಡೆಯಂ ಪಿಡಿಯೆ
ಆಕಸ್ಮಿತಂ ತಾನೆನುತ್ತೆಲ್ಲರುಂ ನುಡಿಯೆ
ಆ ಪೋದನಾ ಪೋದನಕಟಕಟ ಮೈಲಾರ
ಆ ಪಿಡಿದನಾ ಕೊಡೆಯನಯ್ಯಯ್ಯೊ ಮೈಲಾರ
ಎಂದಲ್ಲಿ ಜನರೆಲ್ಲ ಬಾಯಳಿದು ಬರುತಮಿರೆ
ನೊಂದು ಮೈಗುಂದಿ ಮಿಗೆ ಮರುಗಿ ಮೊರೆಯಿಡುತಮಿರೆ
ಪರ ಸಮಯಗಳ್ಕುಸಿಯೆ ಪರ ದೈವವಲ್ಲಾಡೆ
ನೆರೆದ ಜನವೆಲ್ಲವದ್ಭುತದೊಳುಂ ಮುಳುಗಾಡೆ
ನಡೆತಂದನಪ್ರತಿಮನಲ್ಲಿ ಕಿರಿದಂತರಂ
ಕೊಡೆಯ ನೆಳಲೊಳಗೆ ಮೃಡಮೂರ್ತಿ ಬರುತಿರೆ ಕರಂ
ಮೈಲಾರನಂ ಬಿಡುವುದೆಮಗೆ ಶಶಿಶೇಖರಾ
ಮೈಲಾರನಂ ಬಿಡುವುದೆಮಗೆ ಕರುಣಾಕರಾ
ಎಂಬ ಕಿಂಕುರ್ವಾಣದವರುಮಂ ಮನಂಗೊಂಡು
ಬೆಂಬಳಿಯೊಳೈತರ್ಪ ಜನದ ಬರವಂ ಕಂಡು
ತಿರುಗಿ ಮೈಲಾರನಂ ನೋಡಿ ನೀನೇಂ ಬಂದೆ
ಪುರಜನಂ ಮರುಗುತಿರಲೇಕೆ ಮೈಲುಗ ಬಂದೆ
ಕೊಡು ಕೊಡೆಯನಾ ವಕ್ರಪಾದಂಗೆನುತ್ತಮಿರೆ
ಕೊಡಲಾರದಲ್ಲಿ ಮೈಲುಗ ನುಡಿದನೊಪ್ಪುತಿರೆ

ದೇವ ಈ ಕೊಡೆ ಎನಗಿರಲ್ವೇಕು ಶಂಕರಾ
ದೇವ ಈ ಕೊಡೆಯ ನಾಂ ಕೊಡೆ ಬಿಡೆಂ ಶಂಕರಾ
ಕೊಡೆವಿಡಿದು ಪೊಡವಿಯೊಳು ರಂಜಿಸುವೆನೆಲೆ ದೇವ
ಕೊಡೆಯಿರಲ್ಭೂತಳಂ ಬೆಸಕೈವುದೆಲೆ ದೇವ
ಕಡು ಕರುಣದಿಂ ನೋಡಿ ಕೊಡೆವಿಡಿದು ನಿಲ್ಲೆಂದು
ಪೊಡವಿಗೀ ಕೊಡೆಯಿಂದೆ ಪೆಸರಕ್ಕು ನಿನಗೆಂದು
ಇಂತು ವೈಲಾರನಂ ಕೊಡೆವಿಡಿಸಿ ನೋಡುತಂ
ಅಂತಕಾಂತಕತನುಜನತಿ ಮುದದೊಳೊಪ್ಪುತಂ

ತಿರುಗಿ ಕಿರಿದಂತರಂ ನಡೆತರುತ್ತಿರ್ಪಲ್ಲಿ
ಉರವಣಿಸಿ ಭೈರವಂ ಸಂಭ್ರಮದೊಳಿರಲಲ್ಲಿ
ಪಿಡಿದ ಡಮರುಗದ ಕಡು ಹೊಯ್ಲು ಸಂಭ್ರಮಗಳಿಂ
ನಡೆದು ಕೂಳಂ ಬಂದು ತಿರುಗುತಿರ್ಪವರ್ಗಳಿಂ
ತಲೆಗೆದರಿ ಯಲಗಿನಿಂ ತಿವಿದುಕೊಳುತಿರ್ಪರಿಂ
ನೆಲದಿ ನಿಂದಿರ್ದು ಮಾಮುಸಕದಿಂ ಕುಣಿವರಿಂ
ಎಸೆದಿರ್ದ ಭೈರವನ ನೆರವಿಯಿಂ ನೆರೆ ಕಂಡು
ಅಸದಳದ ಶಿವಭಾರವಲ್ಲಿರ್ಪುದಂ ಕಂಡು
ಶಿವಭಾರವೇಕೆ ತ್ರಿಶೂಲ ತಾನಿವರ್ಗೇಕೆ
ಶಿವನ ಭಕ್ತರ್ಗಲ್ಲದನ್ಯರ್ಗೆ ತಾನೇಕೆ
ಎಂಬ ನುಡಿಯಿಂ ಮುನ್ನ ಜನದ ಎದೆ ಜಗ್ಗೆನಲು
ಇಂಬರಿದು ಭೈರವಂ ಪರಿತಂದು ಭೋಂಕೆನಲು
ಶಿವಭಾರಮಂ ಪೊಳ್ತು ಪದತಳಕ್ಕೆರಗುತಿರೆ
ಶಿವಮೂರ್ತಿ ನೀನೆನಗೆ ಕರುಣಿಪುದೆನುತ್ತಮಿರೆ
ಕರುಣದಿಂ ಭೈರವಂಗಿತ್ತು ಶಿವಭಾರಮಂ
ಧರೆ ಪೊಗಳುತಿರೆ ಕೊಟ್ಟ ಕಿಂಕರಾಕಾರಮಂ

ತಿರುಗಿದಂ ನವಿಲೆಯತ್ತಲು ಶಂಕರಧ್ಯಾನಿ
ಬರುತಿರ್ದನಪ್ಪಮ್ಮನತುಳ ಬಲ ಕಡುಮಾನಿ
ಶಿವನಲ್ಲಿ ನೊಸಲಕಣ್ಣಾಂ ಪಡೆದ ಸಂಪದಂ
ತವನಿಧಿಯನೊಳಕೊಂಡು ಕೊಟ್ಟ ಮಹಿಮಾಸ್ಪದಂ



ಉಗ್ರ ನರಸಿಂಹನಂ ಭಂಗಿಸಿದ ಭೀಕರಂ
ಉಗ್ರಲೋಚನದ ಭಾಳಸ್ಥಳ ಭಯಂಕರಂ
ಪೆಂಪೇರ ವೈಲನಂ ಕೊಡೆವಿಡಿಸಿದುನ್ನತಂ
ಬೆಂಬಿಡದೆ ಭೈರವನನುದ್ಧರಿಸಿದುನ್ನತಂ
ಪರದೈವಸಂತಾನ ಘನಪವನವಿಸ್ತಾರಂ
ಪರಸಮಯ ತಿಮಿರ ಕುಲಕಮನೀಯ ಭಾಸ್ವರಂ
ಅರರೆ ಷಡ್ದರ್ಶನದ ಗರ್ವಸರ್ವಸ್ವಹಂ
ನರರ ದುರಿತೋಷ್ಣಕಾನನ ದಾವದರ್ಪಹಂ
ಆಹ ನಂದಿಯ ಮೊಗವಡದ ಮಹಿಮನೈತರಲು
ಸಾಹಸಾಭರಣನೋಲ್ದೂರುತ್ತ ನಡೆತರಲು

ಕಂಡಿದಿರ್ಗೊಂಡರಾ ನವಿಲೆಯ ಮಹಾಗಣಂ
ಚಂಡ ಕರದಂಡಧರ ಹರನ ನಚ್ಚಿನ ಗಣಂ
ಸಿಡಿಲನಿದಿರ್ಗೊಳ್ವ ಜೀಮೂತ ಸಂಕುಲದಂತೆ
ಕಡುಗಾಯ್ದ ಬಿಸಿಗಣ್ಣನಿದಿರ್ಗೊಳ್ವ ನೊಸಲಂತೆ
ದಿನಕರನನಿದಿರ್ಗೊಳ್ವ ಪೂರ್ವಾದ್ರಿಯಂದದಿಂ
ಅನುಪಮನನಿದಿರ್ಗೊಳ್ಳುತೆಲ್ಲರಾನಂದದಿಂ
ಇದಿರ್ಗೊಂಡು ಬಂದು ಶಂಕರದೇವರಂ ಕಂಡು
ಸದಮಲನನೀಶ್ವರನನಪ್ರತಿಮನಂ ಕಂಡು
ನಳನಳಿಪ ಕೆಂಜೆಡೆಯ ಕಮನೀಯನಂ ಕಂಡು
ತೊಳತೊಳಪ ಸುಲಿಪಲ್ಲ ಸತ್ಯಮಯನಂ ಕಂಡು
ಪರಮಗುರುವಂ ಶರಣಕಲ್ಪತರುವಂ ಕಂಡು
ವರಬಂಧುವಂ ಭಕ್ತಸುಖಸಿಂಧುವಂ ಕಂಡು
ಜಡೆಯಶಂಕರದೇವರಂ ಹರುಷದಿಂ ಕಂಡು
ಬಿಗಿದಪ್ಪಿ ತೆಗೆದಪ್ಪಿ ಕಟ್ಟಳ್ಕರಿಂದಪ್ಪಿ
ಅಗಿವತಿ ಸ್ನೇಹರಸದಿಂದಗಲದಂತಪ್ಪಿ
ಮುಂಡಾಡಿ ಕೊಂಡಾಡಿ ತಳ್ಕೈಸಿ ಕುಣಿದಾಡಿ
ಕೊಂಡಾಡಿ ಕೊಂಡಾಡಿ ಭಕ್ತಿಯಿಂ ಮಣಿದಾಡಿ
ಪೋದ ಬಂದಾದ ವೃತ್ತಾಂತಮಂ ಬಿನ್ನೈಸಿ
ಸಾದರಂ ಮಿಗೆ ಲಲ್ಲೆಗರೆದು ನೆರೆ ಬೋಳೈಸಿ

ಗುಂಜಾದಿ ನವವಿಷಕ್ರಿಯೆಗಳಂ ಪೇಳ್ಪೈಸಿ
ರಂಜಿಸಲ್ ಶಂಕರಂಗಿತ್ತಿತ್ತು ಹಾರೈಸಿ
ಸತ್ಯಪ್ರಸಾದವಂ ಮನವಾರೆ ಕೈಕೊಂಡು
ನಿತ್ಯನಾನಂದದಿಂ ಶಂಭುವಂ ಬೀಳ್ಕೊಂಡು
ನಡೆತಂದು ನಿಜನಿಳಯವಂ ಪೊಕ್ಕು ರಾಗದಿಂ
ಜಡೆಯ ಶಂಕರನ ಚರಣಧ್ಯಾನ ಯೋಗದಿಂ
ಇರುತಮಿರಲಂದಾಗ ವಕ್ರಪಾದಂ ಪೋಗಿ

ಪುರದೊಳಗೆ ಧಾನ್ಯಕ್ಕೆ ಪೋಗುತಮಿರೆ ಪಿರಿದಾಗಿ
ತಂದ ಧಾನ್ಯಂ ಪೆರ್ಚಿ ರಾಶಿಯಾಗಿರೆ ಕಂಡು
ಅಂದು ಶಂಕರ ದಾಸಿಮಯ್ಯಂ ಮನಂಗೊಂಡು
ಗಣಪರ್ವಮಂ ಮಾಡಲೆಂದು ಮನದೊಳ್ಬಗೆದು
ತ್ರಿಣಯನುಂ ವಕ್ರಪಾದನನಳ್ಕರಿಂ ಕರೆದು
ಸುರಿದಿರ್ದ ಧಾನ್ಯಮಂ ಕೊಟ್ಟಣವ ಹಾಯ್ಕಿಸೆನೆ
ಇರದೆ ಶಂಕರಪುರದ ಮನೆಗಳೊಳ್ ಸುರಿವುದೆನೆ
ಕರವೊಳ್ಳಿತೆಂದಲ್ಲಿ ವಕ್ರಪಾದಂ ಬಂದು
ಭರದೊಳ್ಳಿತೆಂದಲ್ಲಿ ಧಾನ್ಯಂಗಳಂ ತಂದು
ಸುರಿಯಲ್ಕಿದೇನೆನಲು ಕೊಟ್ಟಣವ ಮಿದಿವುದೆನೆ
ಅರಿದಿದೆಂದೆಲೆ ಮಾರಿಕವ್ವೆ ತಾಂ ಮಿದಿವಳೆನೆ

ಕೇಳ್ದಲ್ಲಿ ವಕ್ರಪಾದಂ ತಿರುಗಿ ಪರಿತಂದು
ಅಳ್ದು ಅವಧಾರೆಂದು ಮೆಯ್ಯಿಕ್ಕುತಂ ನಿಂದು
ಒಂದು ಮನೆಯೊಳಗೆ ಬತ್ತವನೆಯ್ದೆ ಸುರಿವಲ್ಲಿ
ಎಂದಳೊಕ್ಕಲಿತಿ ಯೋರ್ವಳ್ಕಿಂದು ತಾನಲ್ಲಿ
ಮಿದಿಯಲಾರೆಂ ಮಾರಿಕವ್ವೆ ಮಿದಿಯಲ್ಕೆಂದು
ಒದರಿ ನುಡಿಯಲ್ಕೆ ಆ ಬತ್ತವಂ ತಂದಿಂದು
ಎಂದೊಡಾಹಾ ನಮಗೆ ಬುದ್ಧಿಗೊಟ್ಟಳ್ಮಗನೆ
ತಂದು ಧಾನ್ಯವನೆಲ್ಲವಂ ಬೇಗದಿಂ ಮಗನೆ
ಊರ ಪೊರಗಣ ಮಾರಿ ಮಸಣಿಗಳ ಗುಡಿಗಳಿಗೆ
ಆರೈದು ಧಾನ್ಯವಂ ರಾಸಿ ಮಾಡೆಂದು ಮಿಗೆ



ಒಳ್ಳಿತಾದುದು ವಕ್ರಪಾದ ಪೋಗೆಂದೆನಲು
ಒಳ್ಳಿತೆನೆ ಧಾನ್ಯವಂ ರಾಶಿಮಾಡೆಂದೆನಲು

ನಡೆದು ಹೆಡಿಗೆಯ ಧಾನ್ಯವಂ ಬಂಡಿಯಂ ನೋಡೆ
ಎಡೆವಿಡದೆ ಪುರಜನಂ ಹಾದಿಗೊಂಡುದು ನೋಡೆ
ಮಾರಿ ಮಸಣಿಗಳು ಮಾಳಿಗೆಯ ಮುಂದಿರೆ ಕಂಡು
ಧಾರುಣಿಗೆ ರಂಜಿಸುವ ಬೆಟ್ಟದಂತಿರೆ ಕಂಡು
ನಡೆತಂದು ಮಾರಿಮಸಣಿಯರೇಳ್ದು ಭರದಿಂದೆ
ಕಡು ಭೀತಿ ಎಡೆಗೊಂಡು ಬಂದು ಭರವಸದಿಂದೆ
ಅಕ್ಕಿ ಯಾಗದೊಡೆ ಪೊಡೆಮರುಪಿ ಕಳೆವಂ ನಾಳೆ
ಮುಕ್ಕಣ್ಣನವತಾರವರಿದರಿದು ನೀಂ ಕೇಳೆ
ನರಸಿಂಹನಂ ನೊಸಲಕಣ್ಣಿಂದೆ ಸೀಳಿದಂ
ಮರುಳು ಶಂಕರದಾಸ ಧರೆಗೆಲ್ಲ ಬಲ್ಲಿದಂ
ಎಂದೀರ್ವರುಂ ಮರುಳ ತಂಡಂಗಳಂ ಕರೆದು
ಬಂದು ಪುರದೊನಕೆ ಮೊರಗಳನೆಲ್ಲವಂ ತಂದು
ಮಾರಿಮಸಣಿಗಳೊನಕೆ ಪಿಡಿದು ಭೂತಂ ಸಹಿತೆ
ಮಾರಾರಿ ಯಣುಗನಂ ಪಾಡಿಸುತೆ ಕೇರಿಸುತೆ
ಮಿದಿದರಾ ರಾತ್ರಿಯೋಳ್ಧರೆ ಮೊಳಗುವಂದದಿಂ
ಮಿದಿದರೆಲ್ಲಾ ಭೂತಮುಂ ಕೂಡಿ ಚಂದದಿಂ
ಅಕ್ಕಿಯಂ ನುಚ್ಚು ತೌಡಂ ಕೇರುತಂ ಬೇರೆ
ಲೆಕ್ಕದಿಂ ರಾಶಿ ಮಾಡುತ್ತೆ ನಲವಿಂ ಬೇರೆ
ಇರಿಸೆ ಶಂಕರದಾಸಿಮಯ್ಯನತ್ತಲ್ಕೋಡಿ

ತರಣಿಯುದಯಿಸೆ ಕಿರಣ ಪರ್ವತಾಗ್ರದಿ ಮೂಡಿ
ನೊಸಲಕಣ್ಣಾತನಾನಂದದಿಂ ಬರುತಮಿರೆ
ಅಸಮಪ್ರತಾಪನಿಧಿ ಕರುಣದಿಂ ಬರುತಮಿರೆ
ಮುಂದೊಪ್ಪಿ ಮಾರಿಮಸಣಿಗಳಿರ್ದರಂತಲ್ಲಿ
ಒಂದೊಂದು ಮರದಲ್ಲಿ ಕೇರುತಂ ಇರಲಲ್ಲಿ
ನರೆಮಂಡೆ ಬಿಚ್ಚೋಲೆ ನಸುಮಾಸಿದುಡಿಗೆಯಿಂ
ತೆರೆಗೊಂಡ ಮೆಯ್ಯ ನುಣ್ಪಿರಿಸಿನದ ಗಾಡಿಯಿಂ
ಮೊಗದೊಳುಂ ದಾಡೆಯೋಳ್ಪತ್ತಿರ್ದ ತೌಡಿನಿಂ
ಸೊಗಯಿಸಿರೆ ತೊತ್ತು ನಡೆವಂತೆ ಮಿಗೆ ಚಲ್ವಿನಿಂ

ಇರ್ದು ಶಂಕರದಾಸಿಮಯ್ಯನಂ ನಡೆ ನೋಡಿ
ಸಾರ್ದು ಭಯಭಕ್ತಿಯಿಂ ಸೈಗೆಡೆದು ಕೊಂಡಾಡಿ
ನಿಂದಿರ್ದು ಹೆರೆಸಾರ್ದು ಕೈಮುಗಿದು ಪೊಡೆವಟ್ಟು
ಇಂದುಧರ ಬೆಸನೆಲ್ಲವಾದುದಂ ಮುಂದಿಟ್ಟು
ನೋಡು ದೇವಾ ಅಕ್ಕಿ ಇವು ನುಚ್ಚು ತಾಡೆಂದು
ಕೂಡೆ ತೋರುತ್ತಮಿರೆ ಲೇಸು ಮಾಡಿದಿರೆಂದು
ಕರುಣಿಸುತ್ತಕ್ಕಿಯಂ ಶಿವನಿಳಯದೊಳಗಿರಿಸಿ
ಬರೆ ನುಚ್ಚನಾ ಮಾರಿ ಮಸಣಿಯರ್ಗರ್ಪೈಸಿ
ಒಂದು ಗಣಪರ್ವವನಗುರ್ವಿನಿಂ ಮಾಡಿದಂ
ನಿಂದು ಶರಣಾವಳಿಗೆ ತುಷ್ಟಿಯಂ ಮಾಡಿದಂ
ಚಾರುತರ ಗಿರಿಗಳೋಳ್ಮೇರುಗಿರಿಯಪ್ಪಂತೆ
ಸುರುಚಿರ ನವಗ್ರಹದ ನಡುವೆ ರವಿ ಇರ್ಪಂತೆ
ನಡುವೆ ಶಂಕರದಾಸಿಮಯ್ಯನೊಪ್ಪುತ್ತಮಿರೆ
ಮೃಡಮೂರ್ತಿಯಾಗಿ ಸಲೆ ನೆಲೆ ಭುವನಕೊಪ್ಪುತಿರೆ
ಇಂತು ಶರಣರ ನಡುವೆಯನವರತಲೊಪ್ಪುತಂ
ಕಂತುಮದಮರ್ದನನ ಭಾವಮುಮನಪ್ಪುತಂ

ಇರಲಲ್ಲಿ ಶಿವದಾಸಿಗಳ್ಗೆ ಗರ್ಭಂ ಮೂಡೆ
ಪರಮ ಶೈವ ಜ್ಞಾನದುರುಳಿ ಬಲಿಯಿತು ಕೂಡೆ
ಪೊರಗೆ ಲಾವಣ್ಯರಸವಂಗದೊಳಗೋಲಾಡೆ
ಮೆರೆವ ಗರ್ಭದ ಪಕ್ವ ಸೂಚನೆ ಕರಂ ಮೂಡೆ
ನವಮಾಸಮಾದುದಾ ಶಿವದಾಸಿಗಳ್ಗಲ್ಲಿ
ಅವಯವಂಗಳ್ಸಡಿಲಿದುಚ್ಚ್ವಪನುಗಲಲ್ಲಿ
ಪುಟ್ಟಿದಂ ಕಂದಂ ಶಿವಜ್ಞಾನದಂದಮೆನೆ
ಮೆಟ್ಟಿದಂ ಮಾಯೆಯಂ ತನಗೆ ನಿತ್ಯತ್ವಮೆನೆ
ಆಗಳಾ ಕಂದನಂ ಕಂಡು ಮಿಗೆ ನಸುನಗುತೆ
ರಾಗದಿಂ ಜಡೆಯ ಶಂಕರದೇವರಂ ಪೊಗುತೆ
ಕಂದನಂ ನೆರೆ ನೋಡಿ ಜಾತಕರ್ಮವ ಮಾಡಿ
ಸಂದ ಸದ್ಯೋಜಾತನೆಂಬ ಪೆಸರಂ ಮಾಡಿ
ಜಡೆಯ ಶಂಕರದೇವರ ಪ್ರಸಾದವನಿಕ್ಕಿ



ಒಡನೆ ಶಿವಭಕ್ತಿಯಂ ಬಾಯ್ತ್ತಿಣ್ಣೆಯುಮನಿಕ್ಕಿ
ಸಲಹುತಿರೆ ನೆರೆದ ನಾಲ್ಕೈದು ಸಂವತ್ಸರಂ

ನೆಲಿಸಲ್ಕೆ ಗರ್ಭಾಷ್ಟಮಂ ದ್ವಿಜಾಗಮಕರಂ
ಕಂಡು ಶಂಕರದಾಸಿಮಯ್ಯನತಿ ಮಹಿಮೆಯಿಂ
ಖಂಡೆಂದುಮೌಲಿಯಲ್ಲಿಗೆ ಬಂದ ನೋಲ್ಪೆಯಿಂ
ಸಕಲ ಮಾಹೇಶ್ವರರ ಪ್ರಕರಮಂ ಕರೆಯಿಸುತೆ
ಅಕಳಂಕ ಚಿತ್ತನಾನಂದದಿಂ ಕರೆಯಿಸುತೆ
ಜಡೆಯ ಶಂಕರನ ಸನ್ನಿಧಿಯಲ್ಲಿ ಹರುಷದಿಂ
ಮೃಡನ ಕಾರುಣ್ಯಮಂ ಪಡೆದು ಅನುರಾಗದಿಂ
ರಂಗಮಂಟಪವೆ ಯುಪನಯನ ಮಂಟಪವಾಗೆ
ಜಂಗಮಪ್ರಕರವೇ ದ್ವಿಜಸಮಿತಿಗೆಣೆಯಾಗೆ
ಉಪನಯನವಾಯ್ತು ಸದ್ಯೋಜಾತ ದೇವಂಗೆ
ಉಪದೇಶವಾಯ್ತು ತಂದೆಯ ಕೈಯ್ಯೊಳಾತಂಗೆ
ಅಂತಾಗ ಪುತ್ರನಂ ಶಿವಭಕ್ತನಂ ಮಾಡಿ
ಸಂತತಂ ಗಣತತಿಯನಾನಂದದಿಂ ನೋಡಿ
ಮಾರಿಮಸಣಿಗಳಿಂದೆ ಕೊಟ್ಟಣಂ ಗುಟ್ಟಿಸುತೆ
ಮಾರಾರಿ ಮೆಚ್ಚೆ ಗಣ ಪರ್ವಮಂ ಮಾಡಿಸುತೆ
ಬಂದ ಶರಣರ್ಗೆ ಪುತ್ರನನೊಪ್ಪಿಸಿಯೆ ಕೊಟ್ಟು
ಇಂದು ಶೇಖರನ ಶ್ರೀಪದಕೆ ನಂಬುಗೆಗೊಟ್ಟು
ಜಡೆಯ ಶಂಕರನ ಅನುದಿನವರ್ಚಿಸುವುದೆಂದು
ಮೃಡನ ಶರಣರ್ಗೆ ಮಿಗೆ ಬೆಸಕೆಯ್ವುದಿನ್ನೆಂದು
ಅಂದು ಸದ್ಯೋಜಾತದೇವಂಗೆ ತಿಳಿಪುತಂ
ಬಂದ ಗಣ ಸಂಕುಲಕೆ ಬಿನ್ನಪವ ಮಾಡುತಂ

ನರಲೋಕದೊಳಗಿರವು ಸಾಲ್ಗಿನ್ನು ಕರುಣಿಪುದು
ಹರನೊಳಗೆ ಪುಗುವುದಕನುಜ್ಞೆಯಂ ಬೆಸಸುವುದು
ಎಂದಲ್ಲಿ ಜಂಗಮದನುಜ್ಞೆಯಂ ಕೈಕೊಂಡು
ಬಂದನಾನಂದದಿಂ ಪುಳಕಮಂ ಕೈಕೊಂಡು
ನಡೆತಂದು ಜಡೆಯ ಶಂಕರದೇವರಂ ಕಂಡು
ಮೃಡನೊಳಗೆ ಪುಗುತೆ ಕಡು ದೃಢಮಂ ಮನಂಗೊಂಡು

ದೇವ ಶಂಕರ ಚಂದ್ರಧರ ಕೃಪಾವಾರ್ಧಿಯೇ
ದೇವ ಗಂಗಾತರಂಗಾವೃತ ಕಪರ್ದಿಯೇ
ದೇವ ಸಂಸಾರವಾರಾಶಿ ವಡಬಾನಲಾ
ದೇವ ಮಾಯಾಬೃಹದರಣ್ಯ ದಾವಾನಲಾ
ದೇವ ಹರಿಯಜರರಿಯದಾದ್ಯಂತ ರಹಿತನೇ
ದೇವ ಪೂಜಿಸುವ ಸದ್ಭಕ್ತ ಸಂಪನ್ನನೇ
ದೇವ ಎಡೆಗುಡುವುದೆನಗೆಲೆ ಜಡೆಯ ಶಂಕರಾ
ಭಕ್ತರಂ ಗರ್ಭದೊಳಗಿರಿಸೆಲೆ ಕೃಪಾಕರಾ
ಭಕ್ತರಂ ಕರುಣದಿಂ ರಕ್ಷಿಸು ದಯಾಪರಾ

ಎನುತೆ ಪುಳುಕಿಸುತೆ ಕಂಪಿಸುತೆ ನಸು ಬೆಮರುತ್ತೆ
ತನಿನೇಹ ವುಣ್ಮುತ್ತೆ ಕೊನೆದು ತಲ್ಲಣಿಸುತ್ತೆ
ತಗೆ ಪಂಚವಕ್ತ್ರವನೆನುತ್ತೆ ಹತ್ತಿರೆ ಸಾರೆ
ಸೊಗಯಿಸುವ ಶಂಕರಂ ತೆರಹುಗುಡೆ ಮನವಾರೆ
ಬೀಜದೊಳಗಂಕುರಂ ಪುಗುತಿರ್ಪ ಮಾಳ್ಕೆಯಿಂ
ತೇಜವುಂ ಕಾಂತಿ ಬಗೆದೊಳಪುಗುವ ಮಾಳ್ಕೆಯಿಂ
ಬಿಟ್ಟ ಹಮ್ಮುಂ ಜೀವನುಂ ಪರಮನಪ್ಪಂತೆ
ನೆಟ್ಟನೆ ಜ್ಯೋತಿ ಪರಮ ಜ್ಯೋತಿಯಪ್ಪಂತೆ
ಕೊಡನುದಕವಾ ಮಹಾಜಲದೊಳ್ಬೆರಿಸುವಂತೆ
ಜಡೆಯ ಶಂಕರದೇವನೊಳ್ಪೊಕ್ಕನೋಲ್ದಂತೆ
ಆಗಳೆರಗಿದವು ಪೂಮಳೆ ಜಗಂ ಮಿಗೆ ಪೊಗಳೆ
ರಾಗದಿಂ ದುಂದುಭಿಧ್ವನಿ ಗಗನದೊಳ್ನೆಗಳೆ
ನೆಗೆದುದು ವಿಮಾನವಾಕಾಶದೊಳ್ಬೆಳಗುತಂ
ಬಗೆ ಮಿಗಲ್ಕೈಲಾಸದತ್ತತ್ತ ಪೋಗುತಂ

ಬಂದು ರಜತಾದ್ರಿಯಂ ಪೊಕ್ಕು ಶಿವನಂ ಕಂಡು
ನಿಂದು ಮೆಯ್ಯಿಕ್ಕಿದರ್ ನಿಷ್ಠೆಯಂ ಕೈಕೊಂಡು
ಇರ್ದ ಶಂಕರದಾಸಿಮಯ್ಯನಂ ನೆರೆ ನೋಡಿ
ಸಾರ್ದು ಪುಳಕಂಗಳಿಂ ತೆಗೆದಪ್ಪಿ ಕೈಗೂಡಿ
ಕೇಳು ನಂದೀಶ ಇಂತಪ್ಪ ಭೀಕರರುಂಟೆ
ಫಾಳಲೋಚನನವನೆನ್ನಿಂದ ಪಡೆದವರುಂಟೆ



ಹರಿಯಜ ಪ್ರತಿಮೆಗಳ ನುರುಪಿ ಕಳೆದವರುಂಟೆ
ಧರೆಯೊಳೆನ್ನಾಜ್ಞೆಯಂ ಕೊಂಡು ತೊನೆದವರುಂಟೆ
ಮಾರಿಯಿಂ ಕೊಟ್ಟಣಂಗುಟ್ಟಿಸಿದರಿಂತುಂಟೆ
ವೀರ ಮೈಲಾರನಿಂ ಕೊಡೆವಿಡಿಸಿದವರುಂಟೆ
ಭಾಪು ಶಂಕರದಾಸ ದೇವ ಶಂಕರದಾಸ
ಭಾಪು ಮಝು ಭಾಪೆನ್ನ ವೀರ ಶಂಕರದಾಸ
ಎಂದು ಕೊಂಡಾಡುತಂ ಗಣಕುಲಕೆ ತೋರುತಂ
ಇಂದುಮುಖಿ ಪಾರ್ವತಿಗೆ ಬೆಸಸಿ ಕೊಂಡಾಡುತಂ
ಹರುಷದಿಂದಂ ನೋಡಿ ಸಾರೂಪ್ಯ ಪದವಿತ್ತು
ಕರುಣದಿಂದಂ ತಂದು ನಿತ್ಯ ತೃಪ್ತಿಯನಿತ್ತು
ಭಾವಜಶರೀರ ವನದಾವ ಮುಖನೊಪ್ಪಿದಂ
ದೇವಪರಿವೃತ ದಕ್ಷ ಯಜ್ಞಹರನೊಪ್ಪಿದಂ
ನಿರುಪಾಧಿಕಾನಂದ ಕಾಂತಿಯಿಂದೊಪ್ಪಿದಂ
ಪರಮ ಶುಭಕರ ಕಾಂತಿ ವರದನಿಂತೊಪ್ಪಿದಂ
ಬೊಬ್ಬಿಡುವ ಸುರರ ತಲೆಗಳ ಭೀಮನೊಪ್ಪಿದಂ
ಅಬ್ಬರಿಸುವಜ ಕಪಾಲದ ಭರ್ಗನೊಪ್ಪಿದಂ
ಅಮೃತಮಥನೋದ್ಭೂತ ಗರಳಧರನೊಪ್ಪಿದಂ
ಅಮರಕುಲಮಕುಟಮಣಿಖಚಿತಪದನೊಪ್ಪಿದಂ
ಸುರಚಿರ ಬ್ರಹ್ಮಾಂಡ ಭರಿತ ಶಿವ ನೊಪ್ಪಿದಂ
ಗಿರಿಜೆಯಪ್ಪಿನ ಪುಳಕ ಭರಿತಾಂಗನೊಪ್ಪಿದಂ
ಅಮಮ ಭಕ್ತರ ಪೆತ್ತ ತಂದೆ ಇಂತೊಪ್ಪಿದಂ
ಅಮಮ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

**ವೃತ್ತ**:- ಮುದದಿಂ ಶಂಕರದಾಸಿಮಯ್ಯ ವಿಭುವಿಂ ಗಾಶ್ಚರ್ಯದಿಂದಿತ್ತು ಭಾ।
ಳದ ಕಣ್ಣಂ ಜಗದೊಳ್ಪ್ರತಾಪ ಶಿವಭಕ್ತಿಜ್ಞಾನ ವೈರಾಗ್ಯಸಂ॥
ಪದದಿಂ ಶೌರ್ಯದೊಳಾವಗಂ ಮೆರೆದ ಗೌರೀವಲ್ಲಭಂ ಭಕ್ತಿ ಸಂ।
ಪದಮಂ ಕೂರ್ತೆಮಗೀಗೆ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ॥

ಸಮಾಪ್ತ.

# ಆದಯ್ಯನ ರಗಳೆ.

**ಕಂದ—** ಆದಯ್ಯನನೂರ್ವಿಗೆ ಗುರು।
ವಾದಯ್ಯನನರುಹಕುಂಭಿಕುಂಭಸ್ಥಳನಿ।
ರ್ಭೇದ್ಯೈಯ್ಯನ ನೆರೆ ಮೆರೆದಂ।
ಮೇದಿನಿಯೊಳಗೆಮ್ಮ ಹಂಪೆಯ ವಿರೂಪಾಕ್ಷಂ॥

## ಮಂದಾನಿಲ ರಗಳೆ.

ಶ್ರೀಗೌರೀಪತಿಯೊಡ್ಡೋಲಗದೊಳು
ರಾಗಂ ಮಿಗಿಲಿರೆ ಗಣತತಿ ಕುಲದೊಳು
ಅಲ್ಲಿಯನಾದಿ ಯೆನಿಪ್ಪ ಗಣೇಶಂ
ಸಲ್ಲೀಲೆಯೊಳಿರ್ಪಲ್ಲಿ ವಿಳಾಸಂ
ಮಿಗೆ ಬಂದಳು ಸುರಕನ್ನೆಯದೋರ್ವಳು
ಸೊಗಯಿಪ ರೂಪಿಂದೊಪ್ಪುವಳೋರ್ವಳು
ಬರೆ ಕಂಡಾ ಗಣನಾಥಂ ಸೋಲ್ತಿರೆ
ಸುರಕಾಮಿನಿಯುಂ ಮೋಹದೊಳೆಳಸಿರೆ
ಹರನವರೀರ್ವರ ನೀಕ್ಷಿಸಿ ನಗುತಂ
ಕರೆದಿಂತೆಂದಂ ಕೃಪೆಯೊಳ್ಮಿಗುತಂ
ನೀವಿರ್ಬರುಮಾ ಧರೆಯೊಳು ಜನಿಸೀ
ಕಾಮನನೇಳಿಪ ಸುಖಮಂ ಧರಿಸೀ
ಬರ್ಪುದೆನಲ್ಬಿನ್ನೈಸಿದನೊಲವಿಂ
ಸರ್ಪಾಭರಣಗೆ ನಗುತಪೆ ನಲವಿಂ
ದೇವಾ ಬಳಿಕಿಲ್ಲಿಗೆ ಬರಲುಂಟೇ
ದೇವಾ ಚರಣಮನೀಕ್ಷಿಪುದುಂಟೇ
ಕಾಮಂ ಕ್ರೋಧಂ ಪಿರಿದಾಧರೆಯೊಳು
ವ್ಯಾಮೋಹಂ ಪಿರಿದವನೀತಳದೊಳು



ವಂಚನೆಯುಂ ಡಂಬುಂ ಪುಸಿಯುವರೊಳು
ಸಂಚಿತ ಪಾಪಂಗಳುಮುಂಟವರೊಳು
ಎಂತಂತಿರ್ಪೆನದಿನ್ನೇನಪ್ಪೆಂ
ಕಂತುಹರಾ ಬಳಿಕೆಂದಾಂ ಬಪ್ಪೆಂ

ಎನೆ ನಗುತೀಶ ಗಣೇಶನನೀಕ್ಷಿಸಿ
ನಿನಗಂಜಲದೇಕಾನೇ ರಕ್ಷಿಸಿ
ನಡೆಯಿಸುವೆಂ ಕಾರಣ ವುಂಟದರೊಳು
ಕಡು ಪೆರ್ಚಿದರ್ಪ ಸವಣರ್ಜಗದೊಳು
ಅವರಂ ಶಿಕ್ಷಿಸಿ ಧರೆಯೊಳ್ಮೆರೆವುತ
ಅವನಿಗೆ ಕೌತುಕ ರಸವಂ ಕರೆವುತ
ಬಳಿಕೆಮ್ಮಲ್ಲಿಗೆ ಸುಖದಿಂ ಬರ್ಪ್ಪುದು
ಪಳಿಯಾಂತಿಲ್ಲಿ ಗಣೇಶ್ವರ ನಪ್ಪುದು
ಎನೆ ಸಂತಸದಿಂದುರ್ಬುತೆ ಕೊರ್ಬುತೆ
ತನು ತೀವಿದ ಪುಳಕಂಗಳ ನಾನುತೆ
ಹರನಂ ಬೀಳ್ಕೊಂಡೊಲವಿಂ ಬಂದಂ
ನರಜನ್ಮಕ್ಕೆಳಸುತೆ ವೃಸಂದಂ

ಬಂದುತ್ತರ ಭಾಗದ ಶಿವಪುರದೊಳು
ಇಂದುಧರನ ಕರುಣಂ ಮಿಗೆ ಭರದೊಳು
ಶಿವಭಕ್ತನ ಸತಿಯುದರದೊಳಿರುತಿರೆ
ಶಿವಭಕ್ತೆಗೆ ಗರ್ಭಂ ಮೂಡುತ್ತಿರೆ
ನಡೆ ಮೆಲ್ಲ ಮೆಲ್ಲನೇ ಜಡನಾಗಿರೆ
ತೊಡೆ ಥಾಳದ ಮೇಳದ ಸುಖಿಯಾಗಿರೆ
ತ್ರಿವಳಿಗಳವಿರಳವಾಗುತೆ ಹಾರಲು
ನವನಾಭಿಯ ಗುಣ್ಪೊಳಗಂ ತೋರಲು
ನಡು ಪೊಂಗುತೆ ಕೀಳ್ಪೊಡೆ ವಳವೇರಲು
ಸಿಡು ಬಾಸೆಗೆ ನಯವೇರುತೆ ಬೀರಲು
ಪೀನ ಕುಚಂಗಳ ತುದಿ ಕಾಗಿಡುತಿರೆ
ನಾನಾ ರುಚಿ ಕಕ್ಷಮನೊಳಕೊಳುತಿರೆ
ಕಂಬುಗ್ರೀವಂ ತೊಳತೊಳಗುತ್ತಿರೆ
ಇಂಬಿಂ ಮುಖವಳಯಂ ಬೆಳಗುತ್ತಿರೆ

ಆಲರ್ಗಣ್ಣಾವಲಯಮಂ ಪಳಿವುತ್ತಿರೆ
ನಲವಿಂ ಕುಂತಳ ವಗ್ಗಳಿಸುತ್ತಿರೆ
ನವಮಾಸಂ ಶಿವಭಕ್ತಗೆ ತೋರಲು
ನವಕಾಂತಿಗಳಾ ಮೆಯ್ಯೊಳ್ಪೇರಲು
ಶಿವನಣುಗಂ ಪೊರಮಡಲನುವಾದಂ
ಅವನಿಯನೀಕ್ಷಿಸಲುರೆ ಕಣ್ದೆರೆದಂ
ಸರ್ವಾಂಗಗಳ್ನಡಿಲಲ್ನಡಿಲುತ್ತಂ
ಸರ್ವೇಶನನೊಳಗಳವಡಿಸುತ್ತಂ
ಕ್ಷೀರಾಂಬುಧಿಯಿಂ ಶಶಿಯೊಗೆವಂದದಿ
ಮೇರುವಿನಿಂ ಸುರಕುಜವೊಗೆವಂದದಿ
ಪುಟ್ಟಿರ್ದವನಿಗೆ ಸತ್ಯಂ ಪುಟ್ಟಲು
ಮೆಟ್ಟಿದವನವನಿಗೆ ಸುಕೃತಂ ಮೆಟ್ಟಲು
ಶಿವನಂ ನೋಡಲು ನೆರೆ ಕಣ್ದೆರೆದಂ
ಸವಿಯಲು ಪ್ರಸಾದಕೆ ಬಾಯ್ದೆರೆದಂ
ಆದಯ್ಯನೆನಿಪ್ಪುದು ತನ್ನಾಮಂ

ಸಾದರಮೀಶಂಗತುಳ ಪ್ರೇಮಂ
ಆಗಿರೆ ಬಾಲ್ಯಮನೊಲವಿಂ ಕಳೆದಂ
ಸಾಗಿಪ ಸುಕುಮಾರತೆಯಂ ತಳೆದಂ
ಸಂಸಾರದ ಸವಿಗಾಣುತ ಬೆಳೆದಂ
ಹಂಸಂ ಬೆಳೆವಂದದಿ ಮಿಗೆ ಬೆಳೆದಂ

ಬೆಳೆಯಲು ಗುರುಕರುಣಂ ತನಗೊದವಿತು
ತಿಳಿವಿನ ಮುಖವೀಶ್ವರನೊಳಗೊದಗಿತು
ತಿಸುಳಂ ಡಮರುಗವಜಶಿರವಭಯಂ
ನೊಸಲೊಳ್ಕಣ್ವೃಷಭಾರೂಢತೆಯಂ
ಲಿಂಗದೊಳಗೆ ಕಂಡಂ ಶಿವನಿರವಂ
ಪಿಂಗದೆ ಕಂಡಂ ಪರಮನ ವರವಂ
ಸೋಮಯ್ಯನೆ ಗುರು ತನಗೆಂದರಿದಂ
ಸೋಮೇಶಂಗತಿ ಮತಿ ಯೆಂದರಿದಂ



ಇಂತರಿವುತ್ತಂ ನೇಮಂ ಮಾಡುತ್ತೆ
ಸಂತತ ಶಿವಸುಖದೊಳಗೋಲಾಡುತ್ತೆ

ಇರೆ ಯೌವ್ವನವಾದಯ್ಯಂಗಾಗಲು
ಹರಭಕ್ತಿಯು ತನ್ನೊಳು ಪುಟವೇಳಲು
ನೊಸಲೊಳು ಭಸಿತಮನೊಪ್ಪದೊಳಿಡುತಂ
ಎಸೆಯಲು ರುದ್ರಾಕ್ಷಿಗಳಂ ಕೊಡುತಂ
ಶಿವನಂಘ್ರಿಗಳಂ ಚಲುವಿಂ ಮುಟ್ಟುತೆ
ಶಿವಸುಖ ಸಂತಸದೊಳಗೋಲಾಡುತೆ
ಶಿವಗಿತ್ತಾ ವೀಳೆಯಮಂ ಸವಿವುತೆ
ಶಿವಧೂಪದೊಳಂ ತನ್ನಂ ಪೊರೆವುತೆ
ಬಲವರುತಂ ಲಲನೆಯರಂ ನೋಡುತೆ
ನಲವಿಂ ಪಶುಪತಿಗಂ ಬಿನ್ನವಿಸುತೆ
ಶಿವನಂ ನೆನೆವುತೆ ಸುಖಮಂ ತಳೆವುತೆ
ಭವನಂ ಪಾಡುತೆ ಭಾವಮನೆಣಿಸುತೆ
ಸರ್ವಂ ಬೆವಹಾರಂಗಳ ತೆರನಂ
ಉರ್ವಿಯೊಳಗೆ ಪರಿದಾಡುವ ತೆರನಂ
ಕೂಡಿದ ಮೊದಲಂ ಲಾಭದ ಪರಿಯಂ
ನೋಡಲು ಲೆಕ್ಕದ ಗಣಿತದ ಪರಿಯಂ
ಕಲಿಸಿದನಾದಯ್ಯಂಗಾ ಜನಕಂ
ಕಲಿಸಲು ಪುತ್ರನ ಕಣ್ಣಂ ಮನಕಂ
ಮಾಯಾ ವೆವಹಾರಂ ತಿಳಿವುತ್ತಿರೆ
ಆ ಯೌವ್ವನದಿಂದಂ ಗರ್ಜಿಸುತಿರೆ
ಪಿತನಾದಯ್ಯನ ಪರಿ ಮೆಚ್ಚುತ್ತಂ
ಸತತಂ ಸಂತಸದಿಂ ಬಾಳುತ್ತಂ

ಮಗನಂ ಕರೆದೆಲ್ಲಮನಾಳೋಚಿಸಿ
ಸೊಗಯಿಪ ಭಂಡಂಗಳ ನೊಲಿದೊಪ್ಪಿಸಿ
ಪಲವೆತ್ತಿನೊಳಂ ತೀವುತ್ತೋವುತೆ
ಪಲವುಂ ದೋಣಿಗರಂ ಕರದೀವುತೆ

ಪುತ್ರಂಗೆಲ್ಲವನಪ್ಪೈಸುತ್ತಂ
ಪತ್ತು ಸಹಸ್ರಂ ಪೊಂಗಳ ತರುತಂ
ಪುತ್ರನ ಕೈಯ್ಯೊಳ್ಕೊಟ್ಟಂತೆಂದಂ
ಉತ್ತಮ ವಸ್ತುಗಳಂ ಕೊಳ್ಳೆಂದಂ
ಪುಲಿಗೆರೆಯಣಿಗೆರೆಯುಂ ಪುರದೊಳಗಂ
ನಲಿವಿಂ ಪಲವುಂ ಪಟ್ಟಣದೊಳಗಂ
ಪರಿದಾಡುವುದೆಲೆ ಕಂದ ಎನುತ್ತಂ
ಹರನಂ ನೆನವುದು ಮರೆಯದೆನುತ್ತಂ
ಸೋಮಯ್ಯಂ ನಿನ್ನೊಡನೇ ಬಪ್ಪಂ
ಸೋಮಯ್ಯಂ ಚಿತ್ತದೊಳೊಲವಿಪ್ಪಂ
ಲೋಭದೊಳಿಪ್ಪುದು ಸದ್ವ್ಯಯವಾಗದು
ಲಾಭವನರಿವುದು ಮರೆದಿರಲಾಗದು
ಎನೆ ನಸುನಗುತಾದಯ್ಯಂ ನುಡಿದಂ
ಮನಸಿಜ ಹರನಣುಗಂ ನೆರೆ ನುಡಿದಂ
ಪೊದಲೀಶನ ಸದ್ಭಕ್ತಿಯೆ ಲಾಭಂ
ತದನಂತರವಿನ್ನುಂಟೇ ಲಾಭಂ
ಎನುತಾಗಳೆ ಪಿತನಂ ಬೀಳ್ಕೊಂಡಂ
ಮನದೊಳು ಸೋಮಯ್ಯನನೆಡೆಗೊಂಡಂ
ನಡೆತಂದಂ ಭಕ್ತಿಯೊಳಾದಯ್ಯಂ
ನಡೆ ತರುತಿರ್ದಂ ಶಿವನಾದಯ್ಯಂ

ಇತ್ತಲು ಸುರಸತಿ ಶರ್ವನ ಸಭೆಯೊಳು
ಉತ್ತಮಗುಣ ನಿಧಿ ಜನನದ ವಶದೊಳು
ಸಲುತಂ ಪುಲಿಗೆರೆಯೊಳು ಬಂದೊಪ್ಪುವ
ಸಲೆ ಸವಣರ್ಸಂತಸದಿಂದೊಪ್ಪುವ
ಸುರಹೊನ್ನೆಯ ಬಸದಿಯ ಪೂಜಾರಿಯ
ಅರುಹಂತನನರ್ಚಿಪ ಪೂಜಾರಿಯ
ಹರುಷದಿ ಯವನಾ ಲಲನೆಯ ಬಸಿರೊಳು
ಅರುಹಂತನ ಪಾಷದ ಕಗ್ಗೆಸರೊಳು



ಪಂಕಜದಂತಿರೆ ಪುಟ್ಟಿದಳೊಲವಿಂ
ಪಂಕವನೆಂದುಂ ಪೊರ್ದದೆ ನಲವಿಂ

ಪುಟ್ಟಲು ಪದ್ಮಾವತಿ ಯೆನೆ ನಾಮಂ
ಗೊಟ್ಟರು ಪಿತೃಮಾತೆಯರತಿ ಪ್ರೇಮಂ
ತಾನಾಗಿರೆ ಶೈಶವಮಂ ಕಳೆದಳು
ನಾನಾಭರಣಂ ರಂಜಿಸೆ ಬೆಳೆದಳು
ಸಸಿಕಳೆಯಂದದಿ ಕೌಮುದಿಯಂದದಿ
ಬಿಸಕಂದದ ಕಂದದ ಮುಗುಳಂದದಿ
ತಳೆದಳು ಪದ್ಮಾವತಿ ವಿಭ್ರಮಮಂ
ತಳೆದಳು ನವ ಯೌವ್ವನ ಭೂಷಣಮಂ
ನಡು ನಡೆ ನುಡಿಗಳು ಕಿರಿದಾಗುತ್ತಿರೆ
ಮುಡಿಮೊಲೆ ಜಘನಂ ಪಿರಿದಾಗುತ್ತಿರೆ
ಭಾಳತಳಂ ನಯಮಂ ಕರೆವುತ್ತಿರೆ
ತೋಳ ಮೊದಲು ಪೊಗರಂ ಸೂಸುತ್ತಿರೆ
ಅಳಕಂ ನೊಸಲೊಳು ರಂಗಂಬೊಗುತಿರೆ
ತಿಳಕಂ ಕಾಂತಿಯ ಮರೆಯೊಳು ನಿಂದಿರೆ
ತರದಿಂ ಬಾಲ್ಯದ ತೆರೆ ಸರಿವುತ್ತಿರೆ
ನಿರುತದ ನಲವಿಂ ಯೌವ್ವನ ಪೊಪ್ಪಿರೆ
ಪುಷ್ಪಾಂಜಲಿಯಂ ನೋಟಂ ಕೆದರಲು
ಪುಷ್ಪಶರಂ ಮನದೊಳು ಮಿಗೆ ಹೆದರಲು
ತೊಡಿಗೆಯ ನಿನದಂ ವಾದ್ಯಗುಡುತ್ತಿರೆ
ನಡೆ ಸುಗತಿಗಳಂ ಮೇಳೈಸುತ್ತಿರೆ
ಯೌವ್ವನವುಲ್ಲಿ ಸುಪಾತ್ರಮದಾಗಿರೆ
ಅಪ್ಪಳಿಸುವ ವಿಟರೆದೆ ಬಿರಿವುತ್ತಿರೆ
ತನಗೊಳಗಾದಯ್ಯನ ನರಸುತ್ತಂ
ಮನುಜರನಾವಗ ಪೊಲ್ಲದಿರುತ್ತಂ
ಇರೆ ತಾಯ್ತಂದೆಗಳರಿಯದೆ ಮರುಗುತ
ಹರೆಯದೊಳಾರುಮನೊಲ್ಲಳಿದದ್ಭುತ

ಈ ಸುಖವಿನ್ನಾರಿಗೆ ಇರ್ದಪುದೋ
ಈ ಸೊಬಗಿನ್ನಾರಂ ಸಾರ್ದಪುದೋ
ಎಂದುಮ್ಮಳದಿಂದಂ ನೋಡುತ್ತಿರೆ
ಅಂದಂದಿಂಗತಿ ಚಿಂತೆಯೊಳಿರುತಿರೆ

ಬರುತಿರ್ದಂ ಶಂಕರನಾದಯ್ಯಂ
ದುರಿತ ಕುಳಂಗಳ ನೆರೆ ಪೊಯ್ವಯ್ಯಂ
ಪುರದೊಳಗೆಲ್ಲಂ ಕಾವುಳ ನೆಗೆಯಲು
ಅರುಹಾಗಾರದೊಳದ್ಭುತ ಪೊಗೆಯಲು
ಸುರಹೊನ್ನೆಯ ಬಸದಿಯ ಜಿನನಳುತಿರೆ
ಅರುಹ ವ್ರತಿಗಳ್ಕೌತುಕವೆನುತಿರೆ
ಪುಲಿಗೆರೆಯೊಳು ಪೊಕ್ಕಂ ಶಿವಭಕ್ತಂ
ಕಲಿಥಲಿ ಸೌಮ್ಯಭಾಷಾಯುಕ್ತಂ
ಪುಗುತಂ ಬಸದಿಗಳೆದಿರಿರೆ ಕಂಡಂ
ಮಿಗೆ ಬಗೆಯೊಳಗೆ ನಿರೋಧಂಗೊಂಡಂ
ಅರಸುತ ಬಂದಂ ಹರನಾಲಯಮಂ
ಹೆರೆಯಂ ಸೂಡಿರ್ದನ ಮಂದಿರಮಂ
ಕಂಡಂ ಹೋಜೇಶ್ವರನಿಪ್ಪಿರವಂ
ಕಂಡಂ ಮೂಲಸ್ಥಾನದ ವರವಂ
ಅಲ್ಲಿಯೆ ಬೀಡಾರಂ ತನಗಾದುದು
ಎಲ್ಲಾ ವಸ್ತುವಿನಾಲಯಮಾದುದು
ಬಂದ ಸುವಸ್ತುವನಲ್ಲಿರಿಸುತ್ತಂ
ಬಂದ ಗ್ರಾಹಕ ತತಿಗೀವುತ್ತಂ
ಮೊದಲುಂ ಲಾಭಂಗಳ ನೋವುತ್ತಂ
ಸದಮಲ ಚಿತ್ತಂ ಸುಖದೊಳಿರುತ್ತಂ

ಒಂದು ದಿನಂ ನೇಮಂ ಮಾಡುತ್ತಿರೆ
ಇಂದುಧರನ ಭಕ್ತಿಯನೊಳಕೊಂಡಿರೆ
ಪುಳುಕದ ಸಂದಣಿಯಿಂ ಪರುಶನಮಂ
ಜಳಬಿಂದುಗಳಿಂದಂ ದರುಶನಮಂ



ಮಾಡುತ ಪಾದೋದಕಮಂ ಕೊಳುತಂ
ನೋಡುತೆ ಹರಕರುಣಮನೆಡೆಗೊಳುತಂ
ಭರದಿಂ ಪ್ರಸಾದ ಜೀವಕನಾದಂ
ಹರಪದ ಪಂಕಜ ಭಾವಕನಾದಂ

ಪಟ್ಟಣಮಂ ನೋಡಲು ಪೊರಮಟ್ಟಂ
ನೆಟ್ಟನೆ ಸುಖನಿಕರದೊಳಳವಟ್ಟಂ
ಸುಕುಮಾರ ಶಿರೋಮಣಿ ಬರ್ಪಂದದಿ
ಅಕಳಂಕ ಸುಧಾಕರ ಪೊಳೆವಂದದಿ
ನಲವಿಂ ಪದುಮನ ಸಖ ಬಪ್ಪಂದದಿ
ಸುಲಲಿತ ಸೌಂದರ್ಯಂ ನಡೆವಂದದಿ
ಜಂಗಮ ಸುರತರು ನಡೆತಪ್ಪಂದದಿ
ಲಿಂಗದ ಮಹಿಮಾನಿಧಿ ಬಪ್ಪಂದದಿ
ಮೆಲ್ಲನೆ ಪುರವೀಥಿಯೊಳಂ ಬರುತಿರೆ
ಬಲ್ಲಿದನಾದಯ್ಯಂ ಬರುತಿರೆ ಇರೆ

**ಪ್ರಥಮಸ್ಥಲ ಸಂಪೂರ್ಣ**

## ದ್ವಿತೀಯಸ್ಥಲ.

**ಕಂದ**— ಪುಲಿಗೆರೆಯ ಪುರಜನಂಪೂ।
ವಲಿಗೆವರಿದ ಪುಷ್ಪಸಾರ ಭಾಸ್ವಾದಮವಾ ।
ಕುಳಿತ ಮಧುಕರ ಮುಖೋದ್ಗತ।
ಕಳರವವೀಥಿಯೊಳೆ ಬರಲಾದಯ್ಯಂ॥

**ಗದ್ಯ**— ಇಂತು ಪುರವೀಥಿ ನಿರೀಕ್ಷಣ ಸಂಜನಿತ ಹರುಷ ಪುಳಕ
ಶರೀರಂ ಸುಖನಿಕರ ಮುಖಾವಲೋಕನನಾಗುತ್ತಂ ಬರೆವರೆ ಮುಂದೆ
ಸುಧಾಧವಳಿತ ಸೌರಭಾದಿ ವೇದಿಕಾಸ್ತಂಭಂಗಳ ನಡುವೆ ಹಂಸ ಕುಳ
ಕೀರ ಕುರವಕ ಸರಸೀರುಹ ಲತಾವಳಿಗಳ ತಂಡಣೆಯಿಂ ಕೊಳನಂತೆ
ವಿರಾಜಿಪ ವೇದಿಕೆಯ ಮೇಲೆ ಪದ್ಮಾವತಿಯಂ ಭೊಂಕನೆ ಕಂಡು ಸ್ನೇಹಂ
ಕವಿದು ಆರ್ತಂ ತಲೆದೋರಿ ತಾತ್ಪರ್ಯಂ ಕೈಮಿಕ್ಕು ಲವಲವಿಕೆ ಬೆಳೆದು
ಸವಿನೋಟಂ ಸಂದಣಿಸಿ ಸೌಂದರ್ಯದ ಮದಂ ಸೀಮೆಯ ನೊಳಕೊ
ಳಲಾರದೆ ಲಾವಣ್ಯದ ರಸದೊಳು ತಾಂ ಮುಳುಗಿ ನೋಡಲರಿಯದೆ
ಸಿಕ್ಕಿದ ವಿಲೋಚನದ ಬಳಿಸಂದು ಮನದೊಡನೆ ಭಾವಂ ಬಲಿದು ಸಾತ್ವಿಕ
ರಸಪರವಶದಿಂ ಮಿತ್ರರ ಮೇಲೆ ಮೆಯ್ಯನೀಡಾಡಿ ಪರಮಹಂಸನಂತಿರ್ದ
ಆದಯ್ಯನಂ ಪದ್ಮಾವತೀದೇವಿ ಬೋಂಕನೆ ಕಂಡು ನವಯೌವ್ವನವಂ
ಮುಂಗಾಣ್ಕೆಗೊಟ್ಟು ರೂಪನೊಪ್ಪಿಸಿಕೊಟ್ಟು ನೋಟವಂ ಇಂಬುಗೊಟ್ಟು
ಆಸೆಯಂ ನಿಮಿರ್ಕೆಗೊಟ್ಟು ಚೆಲ್ವಂ ಸೂರೆಗೊಟ್ಟು ಪ್ರೇಮರಸಂ ತೀವಿ
ಮನಂ ನನೆ ಏರಿ ತವಕಂ ಬೀಗಿ ತನುವರಲ್ದಿರಲಿರ್ಬರ ಪರ್ಬುಗೆಯ ನೇಹಮಂ
ಮಿತ್ರಜನಂ ಕಂಡು ಕಮಳಾಕರಕ್ಕೆ ಹಂಸಮಿಥುನಂಗಳಂ ತಪ್ಪಂತೆ ತಂದು
ಪದ್ಮಾವತಿಯ ಸೆಜ್ಜೆಯರಮನೆಯ ಮೃದುತರ ಹಂಸ ತೂಲ ತಲ್ಪದೊಳು
ಸುಖಮಿಥುನಮನೊಲ್ದಿರಿಸುವಂತಿರಿಸಿ ಸಖೀ ಜನಂ ಕೃತಕ ಸಂಕೇತ
ಗಮನಸ್ಥಾನವಾದರಿತ್ತಲು,

ಪದ್ಮಾವತಿಯುಂ ಆದಯ್ಯನುಂ ಗಾಢಾಲಿಂಗನದ ಮುತ್ತಿಗೆಯತ್ತಲಗ್ಗ
ಳವಾಗಿ ಸಕಲೇಂದ್ರಿಯಂಗಳೊಳಗುಗೊಟ್ಟು ಲಜ್ಜಾರಸಂ ಬೆಂಗೊಟ್ಟು ಅಭಿ
ಮಾನದ ಕೋಂಟೆ ಕೋಳುವೋಗಿ ಧೈರ್ಯದ ಕದಂಡೆರೆದು ಕರಣಂ
ಕಲಿವಿಲಿಯಾಗಿ ಸುಖಂ ಸೂರೆವೋಗಿ ಮನಂ ಪಿಡಿವಟ್ಟು ಮುಟ್ಟಿದ ಸುಖ



ಮಂ ಸೋಮನಾಥನ ಸ್ಮರಣೆಯಿಂ ಸನಿವೃತ್ತಿರ್ಪ ಸುಖ ಸಮಯದೊಳಂ,
ಮುನಿಸಿಲ್ಲದ ಕಲಹಂ ಕೋಪವಿಲ್ಲದ ಖಾತಿ ಭಂಗವಿಲ್ಲದ ಸೋಲಂ ಭಾರ
ವಿಲ್ಲದ ಬಳಲ್ಕೆ ಸಿಪ್ಪೆ ಇಲ್ಲದ ಸಿಡುಸೂಯ್ ತಣಿವಿಲ್ಲದ ತೃಪ್ತಿ ಅಗಲ್ಕೆ ಇಲ್ಲದ
ವಿರಹವಾತುರಿಸಿ ಚಿತ್ತ ಭೂಮಿಯೊಳೊಳಪೊಕ್ಕು ನೇಹದ ಬೀಜಂ ದೇಹ
ಮನ್ಮಥ ಘಟ್ಟಿ ಯಂತ್ರದಾಟದೊಳ್ಪುಟ್ಟಿದ ಸ್ವೇದ ಜಲದಿಂ ತಳಿತು ಪುಳು
ಕದಗೆಯೊಯ್ದು ನಳನಳಿಸಿ ಬೆಳೆದ ಮಕರಕೇತನುದ್ಯಾನದೊಳು ವಿಕಟಂ
ಬರಿವ ವ್ಯಾಕುಳಾಕ್ಷರಂ ಕೊಳರ್ವಕ್ಕಿಯ ಧ್ವನಿಯನಿಂಬುಗೊಳುತಿರೆ ಕಣಿವ
ಳಕಂ ಶಿಳೀಮುಖಂಗಳನನುಕರಿಸೆ ನರು ಸುಯ್ಯಲರೆಂಬ ಗಂಧವಾಹಂ ಸುಳಿ
ಯೆ ಗಾಢಾಲಿಂಗನದ ಲತೆವನೆಯೊಳಗೆ ಸಮಸುಖ ಸಾರ್ವಭೌಮರಾಗಿ
ತಮ್ಮೊಳು ತಮ್ಮನಲ್ಲದೆ ಮತ್ತೊಂದೇನುಮನರಿಯದೆ ತಾವಿಬ್ಬರೊಬ್ಬರಾ
ದಂತೆರಡನರಿಯದೆ

ಪಲಕೆಲವು ವತ್ಸರಂಮಿದೊಂದು ದಿನವಾದಯ್ಯನುಂ ಪದ್ಮಾವತಿ
ಯುಂ ಒಂದಾಗಿ ಬಿನದದಿಂ ವ್ಯಾಘ್ರಪುರದ ಪೊರಗಣ ಪೂರ್ವ ತಟಾ
ಕದಪರಭಾಗದ ತರುವನದೊಳು ಶುಕಪಿಕ ಹಂಸ ಮಯೂರಕೀರ ಲೀಲಾ
ನಿರೀಕ್ಷಣಾಸಕ್ತರಾಗಿರಲಲ್ಲಿಗೆ ನೀಳ್ದ ಕೆಂಜೆಡೆಯಿಂ ತಾಳ್ದ ಕುಂಡಲದಿಂ ಉಟ್ಟ
ಪುಲಿದೊವಲಿಂ ತೊಟ್ಟ ರುದ್ರಾಕ್ಷೆಯಿಂದಿಟ್ಟ ಭಸಿತದಿಂ ಪೊಳೆವ ಕಣ್ಗಳಿಂ
ಬೆಳೆಪ ಗಂಡಸ್ಥಲವಿಂ ತೊಳಪ ಸುಲಿಪಲ್ಲ ವಿಳಾಸದಿಂ ಮೆರೆವ ವೈವಕಗು
ಬನಕ್ಕೆ ಬೆಳ್ದಿಂಗಳಂ ಸೂಸೆ ಸತ್ಯದಂತೆ ಪುಣ್ಯದಂತೆ ಭಕ್ತಿಯಂತೆ ಬರು
ತಿರ್ಪ ತಪೋಧನಮೂರ್ತಿಗಳ ಆದಯ್ಯಂ ಕಂಡು ಭಯಭಕ್ತಿಯಿಂದಿದಿ
ರ್ವಂದು ಅಷ್ಟಾಂಗ ಪ್ರಣುತನಾಗಿ ನಿಂದಿರ್ದು ದೇವ ಎತ್ತಣಿಂ ಬಿಜ
ಯಂಗೈದಿರಿ ಕಂಗಳ ಕಾಂತಿ ಕುಂದಿದವು ಮುಖಮಂಡಲಂ ಕೊರಗಿದವು
ಪುಣ್ಯೋದರಂ ಬಡವಾದುದು ಬೆಸಕ್ಕೈವೆನೆಂದು ಬಿನ್ನೈಸಿದ ಭಕ್ತನ
ಮೊಗಮಂ ನೋಡಿ ಎಲೆ ಮಗನೆ ಮುಂದರಿಯದೆ ಬಂದೀ ಊರಂ
ನಿನ್ನೆ ಪೊಕ್ಕುನ್ನತಿಗೆಟ್ಟು ಬಸದಿಗಳಂ ಬತ್ತಲೆಯ ಜೋಗಿಗಳಂ ಕಂಡು
ಬೆಗಡುಗೊಂಡು ಬೇವಿನ ವನಮಂ ಪೊಕ್ಕಂತೆ ಪೊಲಗೇರಿಯಂ ಸಾರ್ದಂತೆ
ದೆಸೆಗೆಟ್ಟು ತೃಷೆಯಡಗದೆ ಪತ್ತುಪವಾಸಂ ಪತ್ತಿ ನಡೆಯುಡುಗಿ ತ್ರಾಣಂ
ಪರತು ಕಂದಿ ಕುಂದಿ ನೊಂದು ವ್ಯಾಘ್ರಪುರವಂ ಪೊಕ್ಕು ವ್ಯಾಘ್ರಮು
ಖಮಂ ಕಂಡಂತತಿ ಭಯದಿಂ ಪೊರಮಟ್ಟು ಮೆಲ್ಲಮೆಲ್ಲನೆ ತಟಾಕದೇ
ರಿಯ ಮೇಲೆ ಬರುತಂ ಭಸ್ಮಾವಶೇಷ ಲಲಾಟನಾಗಿರ್ದ ನಿಮ್ಮಂ ಕಂಡೆ

ಏನ್ನೆಲ್ಲಿಗಂ ಪೋಗಲಾರೆನೆಂದೊಂದು ನಿರುಪಮಸ್ಥಳದ ನೆಳಲ ಹೊಸ ಹಸಲೆಯ ಮೇಲೆ ಬಳಲ್ದು ಪಟ್ಟಿರಲವರಂ ಕಂಡು,

ಕಣ್ಣೀರಂ ತೀವಿ ಕುಕ್ಕುಳಂಗುದಿದು ಶೋಕರಸದೊಳಾಳ್ದು ದೈನ್ಯದಿಂ ಪದ್ಮಾವತಿಯ ಮೊಗಮಂ ನೋಡಲಾಕೆಯನುಕೂಲಾಲೋಚನೆಯನರಿದು ಸಂತಸಮನಾಂತು ದೇವದೇವ ಪುರದೊಳು ಪೊಕ್ಕತಿಬೇಗದಿಂ ಬೋನಮನನುತರಿಸಿ ತಳುವುಮಾಡವೆ ಬರ್ಪೆನನ್ನೆವರ ಈ ನೆಳಲೊಳಿಲ್ಲಿಯೆ ನೆಲಸಿರ್ಪುದೆಂದು ನಲವಿಂ ಬಿನ್ನೈಸೆ ಸಂತಸಂಬಟ್ಟು ನೀನೆ ಸರ್ವಸಾಧನಮಂ ಬೇಗ ಮಾಡೆಂದು ಕಳುಪೆ ಬಂದು ಪುರಮಂ ಪೊಕ್ಕು ಸಕಲ ಪದಾರ್ಥಂಗಳಂ ತಂದು ಪದ್ಮಾವತಿಗೊಪ್ಪಿಸಲೊಡಂ ದಿವ್ಯ ಪರಿಮಳದಿಂ ಸವಿಯಂ ಸಾಲಿಡುವಮೃತಾನ್ನಮನತ್ಯಾದರದಿಂ ಮಾಡುತ್ತಿರೆ ಅತ್ತಲಾದಯ್ಯಂ ತಪಸ್ವಿ ಪಸಿವನೆಂದು ಬೇಗ ಬಂದು ನಿಳಯಮಂ ಪೊಕ್ಕು ಪದ್ಮಾವತಿಯ ಮೊಗಮಂ ನೊಡಲಾಕೆ ಒಡೆಯರಂ ಬಿಜಯಂಗೈಸಿ ತರುವುದೆನೆ ಅತ್ತಲ್ವನಕ್ಕೆ ಪೋದನಿತ್ತಲು,

ಪದ್ಮಾವತಿಯ ಪಿತನಪ್ಪ ಪಾರಿಷಪಂಡಿತಂ ಮೇರೆಗೆಟ್ಟ ಮತಿಹೀನಂ ಕೋಪಣದಿಂ ಬಂದ ಹೊಸ ಋಷಿಯರೆನಿಪ ನೀಚರಿಗೆ ಚರಿಗೆಯಂ ಪೇಳೆ ಬರಿಯ ಭಂಡರುಂ ಲೋಚಿನಂ ತಾಲ್ಯರುಂ ಬೆತ್ತಲೆಯ ಭ್ರಷ್ಟರುಂ ಕಂಚದ ಖೋಳರುಂ ತಟ್ಟುಗಳ ಅಜ್ಞಾನಿಗಳುಂ ನಾರುವಾಯ ನರಕಿಗಳುಂ ಸರ್ವಮಲಭಾಂಡರುಂ ನೆರೆದು ಬಂದು ಮನೆಯ ಮುಂದೆ ಸಂದಣಿಸೆ ಪಾರಿಷಪಂಡಿತಂ ಕಂಡು ಪೇಳ್ದುದೊಂದು ಮಡಿ ಬಂದುದು ನಾಲ್ಮಡಿಯಾಯ್ತಿನ್ನೇನಂ ಮಾಳ್ಪೆನೆಂದು ಚಿಂತಿಸಿ ತನ್ನ ಸತಿಯಂ ಕರೆದು ಕೇಳಲದಕ್ಕಂಜಲುಬೇಡ ನಮ್ಮ ಪದ್ಮಾವತಿಯ ಗಂಡಂ ಗೊರವಗೆಂದು ಮಾಡಿಸಿದ ಬೋನಮಿರ್ಪುದೇಳಿ ಎಂದು ಮಗಳಂ ಕರೆದು ಕೆಸರ ಕೊರತೆಗೆ ಕಸ್ತೂರಿಯಂ ಕೊಳ್ವಂತೆ ಸುಣ್ಣದ ಕೊರತೆಗೆ ಜೆಳ್ದಿಂಗಳಂ ಬಳಸುವಂತೆ ಮಸಿಯ ಕೊರತೆಗೆ ಮಾಣಿಕವಂ ಕೂಡುವಂತೆ ಬೇಲಿಯ ಕೊರತೆಗೆ ಕಲ್ಪತರುವಂ ತರಿವಂತೆ ಕಸದ ಕೊರತೆಗೆ ಕರ್ಪೂರದ ರಜಮಂ ಬೆರಸುವಂತೆ ಪದ್ಮಾವತಿಯಂ ಬೋನಮಂ ಬೇಡೆ ಪದ್ಮಾವತಿ ನಡನಡುಗಿ ಬೇಡ ಬೇಡ ಕೊಡುವುದಿಲ್ಲೆಂದು ಬಾಗಿಲೊಳ್ನಿಲೆ ಚಂದ್ರಕಳೆಯಂ ರಾಹು ಪಿಡಿವಂತೆ ಪಿಡಿದು ಒಳಪೊಕ್ಕು ಕೊಂಡು ಪೋಗಿ ಸುರಹೊನ್ನೆಯ ಜಿನಪ್ರತಿಮೆಗೆ ಮಾರಿಯಂ ತಪ್ಪಂತೆ ತಂದು ಕಾಡುಗಿಚ್ಚಿಂಗೆ ತುಯ್ಯಲ ಸೂಡುವಂತೆ ಸುಧೆಯಂ ನಾಯಿಗೆ



ರೆವಂತೆ ಪಂಚಭಕ್ಷ್ಯಮಂ ವಾಯಸಂಗಿಕ್ಕುವಂತೆ ಫಳರಸಮಂ ಜಕಂಗಿಕ್ಕುವಂತೆ ತಂದು ಬೆತ್ತಲೆಯ ಬಣಗುಗಳಿಗಿಕ್ಕಿ ಕೆಂಗೈಗಳೊಳು ತಮ್ಮ ಪೂರ್ವಜನ್ಮದ ಕರ್ಮಶೇಷಮನುಂಬಂತುಂಡು ಚಂಡಿಗಳೆಲ್ಲಂ ಪೊರಮಡುವ ಸಮಯದೊಳು,

ಬಳಲ್ದ ತಪೋಧನ ದೇವರ್ಗೆ ಕೈಗೊಟ್ಟು ಮೆಲ್ಲಮೆಲ್ಲನೊಡಗೊಂಡು ಬರ್ಪಾಗಳು ಬೆಳಗಿನ ಮುಂದಣ ಕತ್ತಲೆ ಪರಿವಂತೆ ಪುಣ್ಯದ ಮುಂದಣ ಪಾಪಂ ಪರಿವಂತೆ ನೋಡೆ ನೋಡೆ ಋಷಿಯರ್ಪರಿದು ಪೋಗಲಾದಯ್ಯಂ ಸಂದೇಹಿಸುತ್ತಂ ಮನೆಗೆ ಬಂದು ನೋಡುವಾಗಳ್ ಇರುಳ ತಾವರೆಯಂತೆ ಹಗಲ ಚಂದ್ರಮನಂತೆ ಮಶಿ ಪತ್ತಿದ ಸುವರ್ಣ ಪುತ್ತಳಿಯಂತೆ ಕಂದಿರ್ದ ಪದ್ಮಾವತಿಯಂ ಬೆಸಗೊಳಲು ನುಡಿಯಲಮ್ಮದೆ ಸುಮ್ಮನೆ ನೆರೆ ಬಿಗಿದು ಭೀತಿಗೊಂಡಾಗ ತಮ್ಮ ತಾಯ್ತಂದೆಗಳು ಬಲ್ಪಿಂ ಮನೆಯಂ ಪೊಕ್ಕು ಬೋನಮಂ ಕೊಂಡೊಯ್ದು ಋಷಿಯರ್ಗಿತ್ತರಿನ್ನಿವರ್ಗೆ ಬೋನಮಂ ಮಾಳ್ಪೆನೆಂದು ನುಡಿಯಲಾ ನುಡಿಗೊಮ್ಮೆ ಸತ್ತು ಹುಟ್ಟಿ ಕೆಂಪಡರ್ದ ಕಂಗಳಂ ಕೆತ್ತುವ ಮೀಸೆಯಿಂ ಒತ್ತುವ ಕರಣಂಗಳಂ ಒತ್ತುವಾಸೆಯಿಂ ಮುತ್ತುವ ಕೋಪದಿಂ ಕನಲ್ದು ನೋಡುತ್ತಿವಳಂ ಕೊಂದೊಡಂ ಪಂಡಿತನಂ ಖಂಡಿಸಿದೊಡಂ ತಪೋಧನನಂ ತಣಿಸಿದಂತಾಗದೆನುತ್ತಂ ಒಳಗೊಳಗೆ ಹೊತ್ತಿ ಹೊಗೆವ ಜೈನರ ಸಾವಿನ ಸಂಚಕಾರದುರಿ ಕೋಪಮಂ ಬೈತಿಟ್ಟು ತಪೋಧನನಂ ನೋಡಿ ಎನ್ನೊಡನೆ ನಿಮಗೇಕೆ ಸಲ್ವುದು ಪಾಪಿಯ ಒಡನೆ ಪುಣ್ಯಕಪ್ಪುದೆ ಎಂದನುತಾಪದಿಂದವರನೊಡಗೊಂಡು ಪೋಗಿ ನವಫಲವಿಕ್ರಯ ವೀಧಿಯೊಳು ಕದಳೀಫಳ ದ್ರಾಕ್ಷ ಖರ್ಜೂರ ನಾರಿಕೇಳಾದಿ ಫಲಂಗಳಿಂ ತಪೋಧನನಂ ಕಳಿಪಿ,

ಆದಯ್ಯ ಮನೆಗೆ ಬಂದುಮ್ಮಳದಿಂ ಪಟ್ಟಿರಲಲ್ಲಿಗೆ ಪದ್ಮಾವತಿ ಬಂದಾದಯ್ಯನನಾರೋಗಣೆಗೆಬ್ಬಿಸೆ ಕನಲ್ದು ಕಿಡಿಕಿಡಿಯಾಗಿ ತನ್ನ ದೇಹಮಂ ಛಿನ್ನಪತ್ರಮಾಗಿ ಬಿಸುಡವೇಳ್ಪುದಲ್ಲದೊಡೆ ಒಂದುಪವಾಸವನಾದೊಡಂ ಮಾಳ್ಪೆನಲ್ಲದೂಟವಿಲ್ಲೆಂದು ನುಡಿದ ಮಾತಂ ಕೇಳ್ದು ಮಗಳ ಮೋಹಕ್ಕೆ ಮಾತೆಪಿತರ್ಬಂದು ಬೇಡಿಕೊಂಡೆಲ್ಲಾ ತೆರದಿಂದೊಲ್ಲದಿರೆ,

ಇಂತಪ್ಪಾಶ್ಚರ್ಯವೆಂತಾದೊಡಂ ತಾನರ್ಚಿಪ ಸೋಮನಾಥನಂ ಸುರಹೊನ್ನೆಯ ಬಸದಿಗೆ ತಂದಡಲ್ಲದುಂಬನಲ್ಲ ತನ್ನಂ ಪ್ರಾರ್ಥಿಸಲೇಕೆಂದು ನುಡಿಯೆ ಪಾರಿಷಂ ಕೇಳ್ದು ನೆಟ್ಟನೆ ನುಡಿದ ಕಟ್ಟಣಕಮುಂ

ತೊಟ್ಟನೆ ಕಿವಿಯಂ ಮುಟ್ಟಿ ಘೂರ್ಮಿಸಿ ಗಜರಿ ನುಡಿದಂ ಅದಕ್ಕಾದಯ್ಯಂ
ಕೇಳೆಲೊ ಮರುಳು ಜೈನ ನೀಂ ಪ್ರತಿಯಲ್ಲ ನಿನ್ನ ಮನಮಂ ಪ್ರೇರಿಪ
ನೀಶ್ವರಂ ನೀನೆಂದಂತೆ ಜಿನನಂ ಇಬ್ಭಾಗ ಮಾಡಿ ಸೌರಾಷ್ಟ್ರ ಪತಿಸೋಮ
ನಾಥನಂ ಬಿಜಯಂಗೈದಲ್ಲದೂಟವಿಲ್ಲೆಂಬ ನೇಮಮಂ ಕೈಕೊಂಡೆಂ
ಕೊಂಡೆನೆಂದು ಗದ್ದುಗೆಯಂ ಪೊಯ್ಯಾಸ್ಫೋಟಿಸಿ ನಿಂದಿರ್ದು ಪುಲಿಗೆ
ರೆಯಿಂ ಪೊರಮಡುವಾಗಳೊಡನೊಡನೆ ಬರ್ಪ ಪದ್ಮಾವತಿಯಂ ಕಂಡು
ಸೋಮನಾಥನಂ ತಂದಪೆಂ ಪುಸಿಯಲ್ಲಂಜದಿರೆಂದು ಸತ್ಯದೃಷ್ಟಿಯಿಂ
ಸಾಗಿಸಿ ನೋಡೆ ಪಿಂತಿರಲಾಕೆಯುಂ ನೀವೆಂದು ಬರ್ಪನ್ನೆಗಂ ಅಶನ ವ್ರತಮಂ
ಕೈಕೊಂಡೆಂ ಪೆರಪಿಂಗಿ ನಿಲೆ,

ಸತ್ಯ ನಿಧಿಯೆನಿಪ ಸತ್ಯ ಶರಣನುತ್ತರಾಭಿಮುಖನಾಗಿ ವಿಭೂತಿಯ
ವೀರಂ ರುದ್ರಾಕ್ಷಿಯ ಭದ್ರಗಜಂ ಪಂಚಾಕ್ಷರಿಯ ಪಂಚಾನನಂ ಜೈನಕುಲ
ಕುಮುದ ಮಾರ್ತಂಡನೆನಿಪಾದಯ್ಯಂ ನಡೆದು ಬರುತಂ ಗಿಡಮುಂ
ಮುಳ್ಳುಂ ಮಳೆಯುಂ ಸರಿಯುಂ ದರಿಯುಂ ಹಳ್ಳಂ ಕೊಳ್ಳಂ ಗಟ್ಟ ಬೆಟ್ಟಂ
ಗಳೆನ್ನದೆ ಹುಲಿ ಕರಡಿ ಸಿಂಹ ಶಾರ್ದೂಲಂಗಳಂ ಲೆಕ್ಕಿಸದೆ ಮಳೆ ಬಿಸಿಲು
ಗಾಳಿಗಳಂ ಲೆಕ್ಕಿಸದೆ ಕ್ಷುತ್ತು ತೃಷೆ ನಿದ್ರೆಗಳೆನ್ನದೆ ನಡೆವೆಡೆಯೊಳಂಗಾಲು
ಮೊನೆಗಲ್ಲೊತ್ತಿ ಹಲ್ಲಯಿಸಿ ಬಿರಿದು ಬಿಸಿ ನೆತ್ತರ್ಜಿಗುರ್ತು ರಕ್ತಪಂಕದಿಂ
ಮುಳ್ಳು ಕಡ್ಡಿ ದಸಿಗಳ್ಪತ್ತಿ ಮೆತ್ತಿದೊಡಂ ಕರಯುಗಮಂ ಕಂಪಿಸಿ ಬಸಿರ್ಬತ್ತಿ
ಬಾಯ್ಬತ್ತಿ ಪಲ್ದೋರಿ ಬೆನ್ನು ಕುಸಿದು ಮೊಗ ಒಣಗಿ ಕಣ್ಗಂದಿ ಕಾವುಳಂ
ಕವಿದೊಡಂ ಸೋಮನಾಥನ ದರ್ಶನಭರಭರಿತ ಸರ್ವಾಂಗಂ ಬಗೆಗೊಳ್ಳದೆ
ಭಾವಿಸದೆ ಸರ್ಪಭೂಷಣನ ಧ್ಯಾನದಿಂದಿಪ್ಪತ್ತೆಂಟು ದಿನವಿೂ ತೆರದೊಳಾ
ತುರದಿಂ ಬರ್ಪಲ್ಲಿ,

ನೆತ್ತರ್ಗಲ್ಲೆಗಳಿನುಗುಳ್ವ ಪದತಳದಡಿ ಇಡಲ್ಬಾರದೊಡೆ ಕುಳ್ಳಿರ್ದುಂ
ಕುಳ್ಳಿರಲ್ಬಡೆಯದೆ ಪೊರಳ್ದುರುಳ್ದು ಬರುತ್ತೊಂದು ಬೆಲ್ಲವತ್ತದ ಮರದ ನೆಳ
ಲೊಳ್ಬಿಗತಚೇತನಂ ಪಥಶ್ರಮ ಮೂರ್ಛಿತನಾಗಿ ಬರಲಲ್ಲಿಗೆ ಚೇಲಾಳನ
ಚಿತ್ತವಲ್ಲಭಂ ಅರಿವಾಳ್ತಾಂಡರ ಎಲುದೋರಿ ಸರಸವಾಡುವ ಸುಲಭಂ ಮಹಿ
ಲಯ್ಯನ ಓಪದೆ ನೋಡುವ ದಯಾಭರಿತಂ ಕಿರುಕುರುಪೆತೊಂಡರ ಇರದೆ
ಕಾಡುವ ದಯಾಪರಂ ಸಾಯ ಬಡಿದು ಕಿವಿಯನೂದುವ ಕರುಣಿ ಎನಿಪ
ಸೌರಾಷ್ಟ್ರದೊಡೆಯಂ ಸೋಮನಾಥನೋರ್ವ ವೃದ್ಧ ಮಹೇಶ್ವರನಾಗಿ ಕೊಡೆ
ಕಮಂಡಲಂ ಯಜ್ಞೋಪವೀತಂ ನೊಸಲಭಸಿತಂವೆರಸಿ ಆ ದಾರಿಯಿಂ



ಬರ್ಪಂತೆ ಬಂದಾದಯ್ಯನ ಮುಂದೀವಿದಂತೆ ನಿಂದಿರೆ ಮಗನೆ ಮಗನೆ
ನೀನೆಲ್ಲಿಗೆ ಪೋದಪೆ ಬಳಲ್ಕೆ ಪಿರಿದಾಯ್ತು ಸಮೀಪದೊಳೂರುಂಟೆ ಎಂದು
ಕೇಳಲೊಡಂ ಚಂದ್ರಂಗೆ ಮೇಘಂ ಕವಿದೊಡಂ ಜಗಕ್ಕೆ ತಣ್ಪು ತಪ್ಪದೆಂ
ಬಂತೆ ವೇಷದ ಮರೆಯ ಚಂದ್ರಚೂಡನ ಸುಧಾವಾಕ್ಯವಾದಯ್ಯಂಗೆ ಶೀತ
ಳಾಮೃತವಿತ್ತು ಚೇತನಂಗೊಡಲೆದ್ದು ನಿಂದಿರ್ದು ಮಹೇಶ್ವರಂಗುತ್ತರಂ
ಗುಡುವುದರಿಂ ಮತ್ತೆ ಹತ್ತಡಿಯಂ ಸೋಮನಾಥನನಲ್ಲಿಗೆ ನಡೆವೆನೆಂದು
ಮರುಮಾತುಗೊಡದೆ ಪೋಗುತ್ತಿರೆ ತನ್ನ ಮೇಲಣ ನಿಷ್ಠೆಗೆ ಪನ್ನಗಭೂ
ಷಣಂ ಮೆಚ್ಚಿ ಮುಂದಡ್ಡ ಬಂದು ಕೆಯ್ಯಂ ಪಿಡಿದು ಪೇಳು ಪೇಳೆಲ್ಲಿಗೆ
ಪೋದಪ್ಪೆ ಎನೆ ಸೌರಾಷ್ಟ್ರ ಪತಿಯಂ ಪುಲಿಗೆರೆಗೆ ಬಿಜಯಂಗೈಸಿ ತರಲು
ಪೋದಪೆಂ ನೀಂ ಬಲ್ಲೆಯಾ ನಾನರಿಯದೊಡಾತನನರಿವನ್ನೆಗಂ ಎನ್ನಸು
ರುಳ್ಳನ್ನೆಗಮೈದುವೆನೆಂದು ನುಡಿದ ನಿಶ್ಚಲ ವಚನಕ್ಕೆ ಮೆಚ್ಚಿ ನಿಂದೆಲೆ
ಮಗನೆ ಇಂತಾದೊಡಾಂ ಸೋಮನಾಥಂ ನಿನ್ನ ನಿಷ್ಠೆಗೆ ಮೆಚ್ಚಿ ಬಂದೆಂ
ಕಂದಾ ಬಳಲದಿರೆಂದು ಕರುಣಿಸಲೊಡಂ ಬಳಲಿಕೆಯಡಂಗಿದುದರಿಂ ನಂ
ಬುಗೆ ಏರುತ್ತಂ ವೇಷಮುಂ ಕಂಡು ಶಂಕಿಸುತ್ತಂ ದೇವ ಮಾನುಷ ಚರಿತ್ರಂ
ಮಾನುಷಾಕಾರನಾಗಿರ್ದೊಡೇನೆಂದು ನಂಬಲರಿಯದಿರ್ಪೆಂ ಎನ್ನ ಮನದ
ಸಂದೇಹಮಂ ಪಿಂಗಿಸಿ ಕರುಣಿಪುದೆಂದು ಬಿನ್ನವಿಸಲಾ ಮಾತಿನೊಡನೆ
ಚಂದ್ರಕಳೆ ದಶಭುಜಂ ಕೆಂಜೆಡೆ ಲಲಾಟಲೋಚನಂ ಪುಲಿದೊವಲು ನಂದಿ
ವಾಹನವೊಪ್ಪೆ ಗುರು ಕರುಣಿಸಿದ ಶಿವಲಿಂಗದೊಳಗಣ ಮೂರ್ತಿ ವಿಳಾಸಂ
ಸಾಕಾರ ಸಂವಿತ್ತುವಯುವದ ಪರಬೊಮ್ಮಂ ಸೋಮನಾಥನಾದಯ್ಯನ ಕಣ್ಣಾ
ಪುಣ್ಯದಂತೆ ಮುಂದೆ ತೊಳಗುತ್ತಿರೆ ಇರೆ.

**ದ್ವಿತೀಯಸ್ಥಲ ಸಂಪೂರ್ಣ**

## ತೃತೀಯಸ್ಥಲ.

ಕಂದ – ಕಂಡಂ ತ್ರಿಶೂಲವ ಭಯಂಕ
ರಂಡ ಮರುಗವಜಕಪಾಲವಹಿಪತಿಕಟಕಂ
ಕುಂಡಲವಿಂದು ಕಳಾಪಂ
ಮಂಡಿತನಂ ಹಂಪೆಯಾಳ್ದನಂ ನಲವಿಂದಂ

### ರಗಳೆ.

ಕಂಡು ತವಕದಿಂದಂ ಸೈಗೆಡೆದಂ
ತಂಡದ ಪುಳಕವನಂಗದೊಳಿಡಿದಂ
ಅಧ್ವಕ್ರಮಮಂ ಕಳೆದಂ ತಳೆದಂ
ಸಾಧ್ವಿಯೆನಿಪ ಭಕ್ತಿಯನುರೆ ತಳೆದಂ
ನಿಂದಿರ್ದಂ ಕೈಮುಗಿದಂ ಮುಗಿದಂ
ಇಂದುಧರನ ನೀಕ್ಷಿಸುತೊಳಸುಗಿದಂ
ದೇವಾ ಮುನ್ನಿನ ತೆರದಿಂದಿಪ್ಪುದು
ದೇವಾ ನೋಡುವಡೆನಗರಿದಪ್ಪುದು
ಎಂದೊಡೆ ಮುನ್ನಿನ ಅಂದದೊಳಿರ್ದಂ
ಕಂದನ ಸಾಗರ್ೂಯ್ಯನೆ ಸಾರ್ತಂದಂ
ನಾಡಿದು ಬರ್ಪೆಂ ಸೋಮನವಾರಂ
ಬೇಡೈ ಬೇಡೆಂದಾ ಸಂಸಾರಂ
ಎನಲಾದಯ್ಯಂ ನಾಡಿದು ಬಂದೊಡೆ
ಎನಗೆಂತಭವಾ ನೀನೆಂತೆಂದೊಡೆ
ಇಪ್ಪತ್ತೆಂಟುಂ ದಿನವೆಂದಿತ್ತಂ
ತಪ್ಪದೆ ನಡೆಯಲು ಬಾರದೆನುತ್ತಂ
ಪ್ರಭುವೇ ವಿಭುವೇ ರಕ್ಷಿಸುದೆನುತಂ
ಅಭವಾ ಶಂಕರ ಕರುಣಿಸುದೆನುತಂ
ಆದಯ್ಯನ ನಲವಿಂದಪ್ಪುತ್ತಂ
ಸಾದರದಿಂ ಕೃಪೆಯಿಂ ನೋಡುತ್ತಂ
ಬಿಲ್ವತ್ತದ ನೆಳಲೊಳು ಪಟ್ಟಿರ್ಪೆನು



ಚೆಲ್ವಂ ಪುಲಿಗೆರೆಯೊಳಗಿಟ್ಟಿರ್ಪೆನು
ಮರುದಿವಸಂ ಬಂದಪೆನೆರಡಿಲ್ಲಂ
ನೆರೆ ನಂಬುದಿದೇ ನುಡಿಗೆಡೆ ಇಲ್ಲಂ
ಎಂದಾ ಸುತನಂ ಪಟ್ಟಿರಿಸುತ್ತಂ
ಕಂಡನನೊಲವಿಂ ಬೋಳೈಸುತ್ತಂ
ನಡೆದಂ ಪುಲಿಗೆರೆಯತ್ತಂ ಶರ್ವಂ
ಮೃಡನಭವಂ ನಿತ್ಯಂ ತಾನೋರ್ವಂ

ಇತ್ತಲು ಮರೆವಟ್ಟಿರ್ದಾದಯ್ಯಂ
ಚಿತ್ತಜಹರನಾಜ್ಞೆಯೊಳಾದಯ್ಯಂ
ಘೇಲನೆ ಕಣ್ದೆರೆದಂ ಪುಲಿಗೆರೆಯೊಳು
ಬಳಲುವ ಪದ್ಮಾವತಿ ಇಪ್ಪೆಡೆಯೊಳು
ಕಣ್ದೆರೆಯಲು ಕಂಡಳು ಪದ್ಮಾವತಿ
ನುಣ್ದನಿಯಿಂ ನುಡಿದಳು ಪದ್ಮಾವತಿ
ಎನ್ನಯ ನಿಧಿ ಬಂದುದೆ ಸುಧೆ ಬಂದುದೆ
ಎನ್ನಯ ಕರಿ ಬಂದುದೆ ಸಿರಿ ಬಂದುದೆ
ಎನುತುಪವಾಸದಿ ಪಟ್ಟಿರ್ದೇಳುತೆ
ಮನದೊಲವಿಂ ಪ್ರಿಯನಂ ಬಂದಪ್ಪುತೆ
ಶಿವನಂ ಕಂಡವನಂ ಕಾಣುತ್ತಂ
ಪವಣಿಲ್ಲದ ಸುಖದಿಂ ಸೇರುತ್ತಂ
ಲಲನೆಯರಂ ಪದ್ಮಾವತಿ ಕರೆವುತೆ
ನಲವಿಂ ಬೋನವ ಮಾಡಲು ಪೇಳುತೆ
ಇರಲಾದಯ್ಯಂ ಸತಿಗಿಂತೆಂದಂ
ಭರದಿಂದಂ ಬೋನಂ ಬೇಡೆಂದಂ
ನಾಳೆ ಶಿವಂ ಸೋಮಯ್ಯಂ ಬರ್ಪಂ
ನೀಲಗಳಂ ಸೋಮಯ್ಯಂ ಬರ್ಪಂ
ಗುರು ಬರ್ಪಂ ಉರುತರ ನಿಧಿ ಬರ್ಪಂ
ಹರಿಯಜರರಿಯದಗಮ್ಯ ಬರ್ಪಂ
ಸುರಹೊನ್ನೆಯ ಜಿನನಂ ಸೀಳುತ್ತಂ
ಅರುಹ ಪ್ರತಿಗಳ ನುರೆ ಹೋಳುತ್ತಂ

ಬಂದ ಬಳಿಕ್ಕಂ ಬೋನಂ ಮಾಳ್ಪುದು
ಇಂದುಧರನ ಕರುಣದೊಳೆಸೆದಿರ್ಪುದು

ಎಂಬೀ ನುಡಿಯಂ ಸತಿಯಕೇಳುತೆ
ಬೆಂಬೀಳುತೆ ನಡೆನಡೆಹುತೆ ತಾಗುತೆ
ಪಾರಿಶ ಪಂಡಿತನಲ್ಲಿಗೆ ಬರುತಂ
ದೂರಿಸುತುತ್ಸಾಹದಿಂದಂ ನಿಲುತಂ
ಆಮಯ್ಯಂ ನುಡಿಮುದನರುಹುತ್ತಿರೆ
ಆವರ ಉಡುಗುತ್ತಂ ಪೇಳುತ್ತಿರೆ
ಆಹಾ ತಾನೇ ತಪ್ಪಂ ತಪ್ಪಂ
ಆಹಾ ಆಹಾ ಬಳಿಕೇನಪ್ಪಂ
ಇನ್ನೇನಿನ್ನೇನಭವಂ ಬಂದಂ
ಇನ್ನೇನೀ ಬಸದಿಯೊಳೇ ನಿಂದಂ
ತಪ್ಪದೆ ಯಾತನ ನುಡಿಯುಂ ಧರೆಯೊಳು
ತಪ್ಪದೆ ಭಕ್ತನ ನುಡಿಯುಂ ಇಳೆಯೊಳು
ತಂದಂ ತಂದಂ ತಾರದೆ ಮಾಣ್ಬನೆ
ಬಂದಂ ಬಂದಂ ಬಾರದೆ ಮಾಣ್ಬನೆ
ನಡೆನಡೆ ಎನುತಂ ಬಸದಿಗೆ ಬಂದಃ
ಕಡುಗೋಪದೊಳೆಲ್ಲರ್ಗಂತೆಂದಂ
ಸೋಮಯ್ಯಂ ಬಸದಿಗೆ ಬಂದಂ ಗಡ
ಏಮಾತೇ ಊರೊಳು ನಿಂದಂ ಗಡ
ಹಸನಾಯ್ತಳಿಯನ ನೋಟಂ ಬೇಟಂ
ವಿಷವಾಯ್ತಳಿಯನ ಮಾಟಂ ಕೂಟಂ
ಏಳಿರೆ ರಂಗವೊಲೆಗಳುಮನಿಕ್ಕಿರೆ
ಏಳಿರೆ ಗುಡಿ ತೋರಣವಂಗಟ್ಟಿರೆ
ಎಂಬೀ ಕಟಕಿಗಳಂ ನುಡಿವುತ್ತಂ
ನಂಬದ ನರಕಿಗಳೊಂದಾಗುತ್ತಂ

ಇರಲಸ್ತಾದ್ರಿಯನೇರಿದನರ್ಕಂ
ಧರೆಗಾದುದು ತಿಮಿರದ ಸಂಪರ್ಕಂ



ಜೈನರ ಕಣ್ಣಂಧತೆ ಕವಿದಂದದಿ
ಜೈನರ ಪಾಪಂ ಪೂರಿಸಿದಂದದಿ
ಕತ್ತಲೆ ಪುರದೊಳು ತೀವಿದ ಬಳಿಕಂ
ಒತ್ತಂ ಬಿಸುತಂ ಪರ್ವಿದ ಬಳಿಕಂ
ಬೆಳಗಿನ ಬಿತ್ತಂಕುರಿಸುವ ತೆರದಿಂ
ತೊಳತೊಳಗಿದವಾ ತಾರಕೆ ನಭದಿಂ
ಸೋಮಯ್ಯನ ಬರವರಿಪುವ ತೆರದಿಂ
ಸೋಮಂ ಪೊರಮಟ್ಟಂ ಸಮ್ಮದದಿಂ
ದಿಸೆಯಂ ಕೌಮುದಿಯಿಂ ಧವಳಿಸುತಂ
ರಸೆಯಂ ಕೂಡೆ ಕುಳಿರ್ಕೊಳಿಸುತಂ
ಚಂದ್ರಂ ಪೊರವೊಟ್ಟೊಪ್ಪಿಪ್ಪಿರುಳೊಳು
ಚಂದ್ರಿಕೆ ಸುತ್ತಂ ತೀವಿರ್ಪೆಡೆಯೊಳು
ಸೋಮಯ್ಯನ ಚಿಂತೆಯೊಳಾದಯ್ಯಂ
ವ್ಯಾಮೋಹಂಗಳನಳಿದಾದಯ್ಯಂ
ಚಿಂತಿಸುತಿರಲರುಣೋದಯವಾದುದು
ಕಂತುಹರನ ಕರುಣೋದಯವಾದುದು
ಸವಣರನಾದಯ್ಯಂ ಭಂಗಿಪುದಂ
ತವೆ ನೋಳ್ಪಂ ಭರದಿಂ ಸೋಲಿಪುದಂ
ಎಂಬಂದದೊಳಾದಿತ್ಯಂ ಮೂಡಲು
ಇಂಬಿನ ತಮವೆಲ್ಲಂ ಪರಿದೋಡಲು

ಪಾರಿಷ ಪಂಡಿತನೆಂದಿನ ತೆರದಿಂ
ಆರಯ್ಯದೆ ನಡೆತರುತಂ ಭರದಿಂ
ಸುರಹೊನ್ನೆಯ ಬಸದಿಯ ಪೊಸ ಕದವಂ
ಹರನೊಳಗುದ್ಭವಿಸಿದ ಸನ್ಮತವಂ
ತಗೆಯಲ್ಕುದ್ಯೋಗಿಸಿ ಹೋಗದೆ ನಿಲೆ
ಬಗೆಯೊಳ್ನೆರೆ ಬೆರಗಾಗುತ್ತುಂ ನಿಲೆ
ಒತ್ತಲು ನೂಂಕಲು ಮಿಡುಕದೆ ನಿಂದಿರೆ
ಕೆತ್ತಲು ಕಡಿಯಲು ಸೆಡೆಯದೆ ನಿಂದಿರೆ
ಕದವದು ಚಲಿಸದೆ ಧಾರುಣಿಯಂತಿರೆ

ಕದವದು ತೊಲಗದೆ ಮೋರುವಿನಂತಿರೆ
ಕಂಡಲ್ಲಿಯು ಸವಣರ್ನಡಗುತ್ತಂ
ಚಂಡಿಗಳೆಲ್ಲಂ ಬೆಂಡಾಗುತ್ತಂ
ಚಿತ್ತಲೆಗಳ್ನೆರೆಬಾಯಂ ಬಿಡುತಂ
ಸುತ್ತಿದ ಸವಣರ್ನೆರೆ ಕೂಗಿಡುತಂ
ಪಂಡಿತರೆಲ್ಲಂ ಖಂಡಿತರಾಗುತ್ತೆ
ತಂಡದ ಋಷಿಗಳ್ ತೆರದಿಂ ನೋಡುತ್ತೆ

ಇರೆ ಬರುತಿರ್ದಂ ಹರನಾದಯ್ಯಂ
ಬರುತಿರ್ದಂ ಶಶಿಧರನಾದಯ್ಯಂ
ಧರಣೀ ತಳದೊಳು ಗುರುವಾದಯ್ಯಂ
ಶರಣ ಜನದ ಸುರತರುವಾದಯ್ಯಂ
ಸುಮ್ಮಾನದ ಸಮಸುಖಿಯಾದಯ್ಯಂ
ಹಿಮ್ಮೆಟ್ಟದ ಕಲಿಛಲಿಯಾದಯ್ಯಂ
ನಡೆತರೆ ಪದ್ಮಾವತಿ ಬೆಂಬಿಡದಿರೆ
ಕಡು ನೇಹಿತೆ ಯೊಡನೊಡನೆ ಬರುತ್ತಿರೆ
ಒಪ್ಪದಯ್ಯನ ಸಾಮರ್ಥ್ಯದೊಳುಂ
ಸರ್ಪಾಭರಣನ ಘನ ಕರುಣದೊಳುಂ
ಬಸದಿಯ ಮುಂದಣ ಕುರುಡಂ ಹೆಳವಂ
ಮಿಸುಗುವ ಕಣ್ಕಾಲ್ಪಡೆದುಜ್ವಲವಂ
ತಳೆದಿದಿರ್ವಂದಾದಯ್ಯಂಗೆರಗಲು
ತೊಳತೊಳಗುವ ಭಸಿತವನಿಟ್ಟಿರಲು
ದೇವಾ ಗುರು ನೀವೆಂದೊಡಬರುತಿರೆ
ಭಾವಿಸೆ ಜೈನರು ಬೆರಗಾಗುತ್ತಿರೆ

ಆಯತಿಯಿಂ ಭಕ್ತಿಯ ಭಂಡಾರದಿ
ಬೀಯಗದಲ್ಲಿಗೆ ಕೈ ಬಪ್ಪಂದದಿ
ನಿಷ್ಠೆಯ ನಿಧಿ ಕಡುಪಿಂದೈತಂದಂ
ನೆಟ್ಟನೆ ಬಾಗಿಲು ಮುಂದಂ ನಿಂದಂ
ಸವಣರ ಹಾಳಿದೆ ಕದದೆರೆವಂತಿರೆ



ಸವಣರ ಕಲ್ಲಿದೆ ಹಾಳಾಗುತ್ತಿರೆ
ನಲಿದಾದಯ್ಯಂ ಕಂಡಂ ವಿಭುವಂ
ಸಲೆ ನೆಲಿಸಿದ ಸೋಮಯ್ಯ ಪ್ರಭುವಂ
ಶಿವಭಕ್ತರ ಘನತರ ಸುಖ ಸಿಂಧುವೆ
ಶಿವಭಕ್ತರ ಮನದನುಪಮ ಬಂಧುವೆ
ಶರಣ ಮಹತ್ವದ ನಿತ್ಯದ ಪುರುಳೇ
ಶರಣರ ಚಿತ್ತದ ಬಿತ್ತಿನ ತಿರುಳೇ
ಸುರುಚಿರ ಶರಣರ ಕಣ್ಣಿಂಗತಿಯೇ
ವರಮುನಿಗಳ ಘನಮತಿಯುನ್ನತಿಯೇ
ಎಂದಾದಯ್ಯಂ ನೆರೆ ಪೊಗಳುತ್ತಿರೆ
ಇಂದುಧರನ ಕರುಣಂ ಕವಿವುತ್ತಿರೆ

ಭಕ್ತಿಯ ಬಾಸಣ ಓಸರಿಪಂದದಿ
ಮುಕ್ತಿಯ ಮುಚ್ಚುಳ ಮುಖವರಳ್ವಂದದಿ
ಘಳಿಲನೆ ಶಿವನ ಕವಾಟಂದೆರೆಯಲು
ಪುಳಕಂ ಭಕ್ತನ ಮೆಯ್ಯೊಳು ನೆಗೆಯಲು
ಕಾಮಹರಂ ಕೃಪೆಯಿಂದೊಳಗಿರ್ದಂ
ಸೋಮಧರಂ ಮುದದಿಂ ಮೂಡಿರ್ದಂ
ಅರುಹನನೆರಳ್ಭಾಗಂ ಮಾಡುತ್ತಂ
ಹರನೊಲವಿಂದಂ ಸಲೆ ನೆಲಿಸುತ್ತಂ
ಸುರನದಿ ಜಡೆಮುಡಿ ಶಶಿಕಳೆಯೊಪ್ಪಿರೆ
ಉರಗಾಧಿಪ ಕುಂಡಲಯುಗ ಒಪ್ಪಿರೆ
ಶಶಿರವಿಶಿಖಿನಯನತ್ರಯ ಮೆಸೆದಿರೆ
ಹೊಸ ಸುಧೆ ಸೂಸುವ ಸುಖಮುಖ ಮೆಸೆದಿರೆ
ಡಮರುಗ ತಿಸುಳಂ ದಶಭುಜವೆಸೆದಿರೆ
ಕಮಳಜ ಶಿರವಭಯಕರಂ ಮೆರೆದಿರೆ
ಬಿಸಲಂ ಬೀರುವ ಪುಲಿದೊವಲೆಸೆಯಲು
ಅಸದಳವೆಡೆಗಾಲೊಳು ತೊಡರೆಸೆಯಲು
ಉರಗನ ಹೆಡೆಗಳ ಮಣಿಗೊಡೆ ಎಸೆಯಲು
ಅರರೇ ಸೋಮೇಶಂಗೆ ಸಿಂಗರಿಸಲು
ಅಣಿಯರದಿಂದೊಪ್ಪುವ ವೃಷಭೇಶನ

ಫಣಿಗಳ ಫಣಿಗಟ್ಟಿನ ಮುಗುಳ್ಗೋಡಿನ
ಶೃತಿಗಳ ನೆಲೆವನೆ ಯೆನಿಸುವ ಕಿವಿಗಳ
ಅತಿ ಧರ್ಮದ ಕಣ್ಣೆನಿಸುವ ಕಣ್ಗಳ
ಭೀಕರ ತತಿಯಂ ಕೆಡಿಸುವ ಘ್ರಾಣದ
ಲೋಕದ ಭಕ್ತರ ಬೆಳೆ ಮುಖವಾದುದ
ಸತ್ಯಂ ಶಾಂತಂ ತನುವಾದಂತಿರೆ
ಮುಕ್ತಿಯು ಮೊಳೆ ಫಲವಾದಂತಿರುತಿರೆ
ಯುಗ ಧರ್ಮಂ ಸೇವಿಪ ಚತುರಂಘ್ರಿಯು
ಸೊಗಯಿಪ ಉರಗೆಜ್ಜೆಯು ಘನ ಘಂಟೆಯು
ಪ್ರಣಮ ಧ್ವನಿಗಳು ಅಂದುಗೆಯಾಗಿರೆ
ಅಣಿಯರದಿಂ ಶೃತಿ ಕಿಂಕಿಣಿಯಾಗಿರೆ
ಚಲುವಿಂದೊಪ್ಪುವ ನಂದಿಯನೇರಿದ
ಒಲಿದ ಗಣೇಶ್ವರರೊಲವಂ ಹೇರಿದ
ಹರಿಯಜ ಸುರರಿಗೆ ಪದವಂ ತೋರಿದ
ಶರಣ ಜನಕೆ ತನ್ನಿರವಂ ತೋರಿದ
ಸುರಹೊನ್ನೆಯು ಬಸದಿಯೊಳು ನೆಲಸಿದ
ನರಲೋಕದೊಳಚ್ಚರಿಯಂ ಮಾಡಿದ
ಸೋಮಯ್ಯನನತಿ ಮುದದಿಂ ಕಾಣುತ

ಕಾಮಹರನನತಿ ಒಲವಿಂ ನೋಡುತ
ಆದಯ್ಯಂ ಸುಖದಿಂ ನಲಿದಾಡುತ
ಆದರದಿಂ ಹೆಚ್ಚುತ ಹೊರೆಯೇರುತ
ಕುಣಿವುತೆ ಕೂಗುತೆ ತೊನೆಯುತೆ ತೂಗುತೆ
ಮಣಿವುತೆ ಒಲಿವುತೆ ಬೀಗುತೆ ತೇಗುತೆ
ಬಂದಾ ವೃಷಭನ ಚರಣವನಪ್ಪುತೆ
ಮುಂದರಿಯದೆ ಸುಖ ಮೂರ್ಛೆಯೊಳೊಪ್ಪುತೆ
ಪುಳಕದೊಳುಬ್ಬುತೆ ಗದ್ಗದಿಸುತ್ತಂ
ಇಳಿವಶ್ರುಗಳಿಂದಂ ನನೆಯುತ್ತಂ
ಬೆಮರುತೆ ಬಿಕ್ಕುತೆ ಸುಖದಿಂ ಸೋಂಕುತೆ
ಅಮರ್ದಪ್ಪುತ್ತುಬ್ಬುತೆ ಬೊಬ್ಬಿಕ್ಕುತೆ



ಇದಿರ್ದಾದಯ್ಯನನೀಶ್ವರ ನೋಡುತೆ
ಸಾರ್ದವನಂ ಪಿಡಿದೆತ್ತುತ್ತಪ್ಪುತೆ
ನಲವಿಂ ಮೂರ್ಧ್ನಿಘ್ರಾಣಂ ಮಾಡುತೆ
ಒಲವಿಂ ಸಾಮರ್ಥ್ಯವುಮಂ ಕೂಡುತೆ

ಕೇಳೆಲೆ ಕಂದಾ ಸವಣರ್ನೇರಿದವರು
ಆಳಿದ್ದಿಲ್ಲಾ ಕ್ಷುದ್ರರ್ನೇರಿದರು
ಹೋಗಿಯವಂದಿರನುರೆ ಸಂಹರಿಪುದು
ಬೇಗಂ ಶಿವಭಕ್ತಿಯನುದ್ಧರಿಪುದು
ಪೋಗೆಂದೋರ್ವ ಗಣೇಶನ ನೀವುತೆ
ರಾಗದಿ ಬತ್ತೀಸಾಯುಧವೀವುತೆ

ಕಳುಪಲ್ಕಾದಯ್ಯಂ ನಡೆತಂದಂ
ಕಳೆಯೇರುತೆ ಬಾಗಿಲೊಳಂ ನಿಂದಂ
ನಿಂದಿರೆ ಸವಣರ್ಲಕ್ಕದ ಸಂಖ್ಯೆಗೆ
ಬಂದುರವಣಿಸುತ್ತಿರೆ ಕೋಪಂ ಮಿಗೆ
ಕಂಡಾದಯ್ಯಂ ಬೇಡೆಂದೆನುತಿರೆ
ತಂಡದ ಜೈನರನುರೆ ಗರ್ಜಿಸುತಿರೆ
ನೋಡಿದಪೆಂ ಸೋಮಯ್ಯನನೆಲ್ಲಂ
ಬೇಡೆನ್ನದಿರೆವಿಮೃಷ್ಟವನೆಲ್ಲಂ
ಎನುತಂ ವಚನದೊಳೊಳ್ಪಿತ್ತಾಡುತೆ
ಮನದೊಳು ಪಾತಕವಂ ನೆರೆ ನೆನೆವುತೆ
ಬರಲಾದಯ್ಯಂ ಗರ್ಜಿಸಿ ನುಡಿದಂ
ಆರುಹ ವ್ರತಿಗಳನೆಲ್ಲರ ಜಡಿದಂ
ಕತ್ತಲೆ ಸೂರ್ಯನನಾಲೋಕಿಪುದೇ
ಬತ್ತಲೆಗಳಿರಾ ನಿಮಗೊದಗುವುದೇ
ತರಗೆಲೆ ದಾವಾನಲನಂ ನೋಳ್ಪುದೆ
ಉರಗ ಸಮೂಹಂ ಸಿಡಿಲಂ ನೋಳ್ಪುದೆ
ನೆರೆ ಮೂರ್ಖರಿರಾ ನಿಮಗಿದು ತಕ್ಕುದೆ
ಎನೆ ಲೆಕ್ಕಿಸದುರವಣಿಸುತೆ ಬರೆವರೆ

ತನತನಗೆಲ್ಲಾ ಜೈನರ್ನಡೆತರೆ
ಗಣನಾಥನನಾದಯ್ಯಂ ನೋಡಲು

ಕ್ಷಣದಿಂದೀರ್ವರು ಆಯುಧ ವಿಡಿಯಲು
ಕೊಂಡಾಡಯ್ಯಂ ಶಿವನಂ ನೆನೆವುತೆ
ಕಂಡುರವಣಿಸುತೆ ಜೈನರನಟ್ಟುತೆ
ಕೆಡೆ ಕೆಡೆ ಕೆಟ್ಟ ಶಿವದ್ರೋಹಿಗಳಿರ
ಫಡಫಡ ಪಚ್ಚ ಪಸಿಯ ಪಾತಕರಿರ
ಎನುತಿರಲೊಂದು ಸಹಸ್ರಂ ಸತ್ತುದು
ಮುನಿದಿಡಲಿಚ್ಛಾಸಿರ ಧರೆಗದ್ದುದು
ಈ ತೆರದಿಂ ಬತ್ತೀಸಾಯುಧದಿಂ
ಪಾತಕರಂ ಕೊಲುತಿರೆ ಕಡು ಭರದಿಂ
ಕಂಡಾ ಜೈನರ ತಿಂಥಿಣಿ ಎಲ್ಲಂ
ಗಂಡುಗೆಡುತ್ತತಿ ಭೀತಿಯೊಳೆಲ್ಲಂ
ಸೈಗೆಡೆದುದು ಪಲ್ಲಂ ಕಿರಿವುತ್ತಂ
ವೈಗರೆವುತೆ ಪುಲ್ಲಂ ಕಚ್ಚುತ್ತಂ
ಶರಣೆಂದರನೆಲ್ಲಂ ಮಿಗೆ ಕಾವುತೆ
ಧುರದೊಳಗಿದಿರಾದವರಂ ತೀರ್ಚುತೆ
ಮರೆವೊಕ್ಕವರ ನೆರೆ ರಕ್ಷಿಸುತ್ತಂ
ಹೆರೆ ಸೂಡಿದನಲ್ಲಿಗೆ ತಿರುಗುತ್ತಂ

ಬಂದಾ ಸೋಮಧರಂಗೆರಗುತ್ತಂ
ನಿಂದೊಲವಿಂದಂ ಕೈಮುಗಿವುತ್ತಂ
ದೇವಾ ಜೈನರು ಸಾರ್ದರು ತೀರ್ದರು
ದೇವಾ ಖಳರಂತಕನಂ ಸಾರ್ದರು
ಪರಮ ಪ್ರಭುವೇ ಆಯುಧವಿಂತಿವೆ
ಉರಿವುರಿವುತೆ ಭೋರ್ಗರೆವುತ ನಿಂತಿವೆ
ಇವನೆಲ್ಲಿರಿಸುವೆನಂತಕಹರನೇ
ಭವನೇ ಭರ್ಗನೆ ಗಿರಿಜಾವರನೇ
ಎನೆ ಸೋಮಯ್ಯಂ ಕರುಣಿಸಿ ನೋಡುತೆ
ತನಯನನಾಲಿಂಗಿಸಿ ಮುಂಡಾಡುತೆ
ಖಡ್ಗವನೊಂದೆಡೆಯುಲಿ ಬೈತಿರಿಸಲು
ಖಡ್ಗದ ನಾಮದ ತೀರ್ಥವದೆನಿಸಲು



ಆ ಸಮಯದೊಳೆಲ್ಲಾ ಶರಣರ್ಬೇರೆ
ದೇಶದ ಗಣ ಮುಖ್ಯರ್ಕವಿಗಳು ಬರೆ
ಕಂಡಾದಯ್ಯಂ ಗಣಕುಲಕೆರಗುತೆ
ತಂಡದ ಪುಳಕಾವಳಿಯಂ ಹೇರುತೆ
ಸೋಮಯ್ಯನನೊಲವಿಂ ತೋರುತ್ತಂ
ಕಾಮಹರಂ ಎಲ್ಲರ್ಗರುಪುತ್ತಂ
ನಲವಿಂ ಪ್ರಸಾದ ಭೋಗಂ ಮಾಡುತೆ
ನಲಿನಲಿದೊಲಿದೊಲಿದಕ್ಕರೊಳಾಡುತೆ
ಪದ್ಮಾವತಿಯಂ ನಲವಿಂದಪ್ಪುತೆ
ಪದ್ಮಜ ಮಸ್ತಕ ಹಸ್ತನನರಿಪುತೆ

ಇರೆ ಪೂಮಳೆಗರೆದುದು ನಭದಿಂದಂ
ತರದಿಂ ಮೊಳಗಿತು ದುಂದುಭಿವೃಂದಂ
ಬಹುವಿಧ ವಾದ್ಯಧ್ವನಿ ಪೊಣ್ಮುತ್ತಿರೆ
ಕಹಳಾರವ ವೇಣ್ದಿಸೆ ಗುಣ್ಮುತ್ತಿರೆ
ಬಂದುದು ಪುಷ್ಪಕವಾಗಸದಿಂದಂ
ನಿಂದುದು ಶರಣರ ನಡು ಒಲವಿಂದಂ
ಏರಿದನಾದಯ್ಯಂ ಶುಭಚರಿತಂ
ಏರಿದನಾ ಪದ್ಮಾವತಿ ಸಹಿತಂ
ಶರಣರು ಸುಖದಿಂ ನಲಿದಾಡುತ್ತಿರೆ
ಆರುಹ ವ್ರತಿಗಳು ಬಲವಳಿವುತ್ತಿರೆ
ಪುರಜನವೆಲ್ಲಂ ಬೆರಗಾಗುತ್ತಿರೆ
ಧರೆ ಕೌತುಕದಿಂ ಕೊಂಡಾಡುತ್ತಿರೆ
ನೆಗೆದುದು ಪುಷ್ಪಕವಂಬರ ತಳದೊಳು
ಬಗೆ ಮಿಗೆ ನೆಗೆದುದು ತಾರಾಪಥದೊಳು
ನಡೆತರುತಂ ನಂದೀಶನ ಬಾಗಿಲ
ನಡುವೆ ವಿಮಾನವ ನಿಳಿದಾದಯ್ಯೆಲ
ಒದವಿದ ಭಕ್ತರ ಭಾಗ್ಯದ ಬಯಕೆಗೆ
ಸದಮಲ ಶರಣರ ಪರಮಜ್ಯೋತಿಗೆ
ನಿರುಪಾಧಿಕ ಜ್ಯೋತಿರ್ಮಯ ಭಾನುಗೆ

ಎರಡಾಗದ ನತ ಜನಸುರ ಧೇನುಗೆ
ಸುಯ್ಯಿಕ್ಕುತ ಮುದದಿಂ ಪಟ್ಟಿರ್ದಿರೆ
ಕೆಯ್ಯೆತ್ತುತ ಕರುಣಂ ದೋರುತ್ತಿರೆ
ಶಿವನಾದಯ್ಯಂ ನಲಿದಪ್ಪುತ್ತಂ
ಪವಣಿಲ್ಲದ ಸುಖದಿಂನಪ್ಪುತ್ತಂ
ನಂದೀಶಂಗಾದರದಿಂ ತೋರುತೆ
ನಿಂದ ಗಣಾಳಿಗೆ ನಲವಿಂ ಪೇಳುತೆ
ಮುನ್ನಿನ ಆದಿಗಣೇಶನ ನಾಮಂ
ಸನ್ನುತವಾಗಿಯೆ ಕೊಡುತಂ ಪ್ರೇಮಂ
ಮಿಗೆ ಪದ್ಮಾವತಿಯಂ ಕರೆವುತ್ತಂ
ಸೊಗಯಿಪ ಸುರಸತಿಯರೊಳಿರಿಸುತ್ತಂ
ಕೈಲಾಸಾಧೀಶ್ವರ ನೊಪ್ಪಿರ್ದಂ
ಶೈಲಜೆಯರ ಘನನಿಧಿಯೊಪ್ಪಿರ್ದಂ
ಪುಲಿಗೆರೆಯೊಳು ನೆಲಸಿದನೊಪ್ಪಿರ್ದಂ
ಪುಲಿಗೆರೆ ಯರಸಂ ತಾನೊಪ್ಪಿರ್ದಂ
ಹಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ವಿರುಪಂ ತಾನೊಪ್ಪಿರ್ದಂ

**ಕಂದಃ**— ಅಯ್ಯಯ್ಯ ನಿಮ್ಮ ಸೊಲವಿಂ
ದೊಯ್ಯನೆ ಪುಲಿಗೆರೆಗೆ ಬರಿಸಿ ನಿಲಿಸಿದ ಕಲಿಯಾ
ದೈಯ್ಯನವನೆಂದು ಭಕ್ತಿಯ
ನಯ್ಯಯ್ಯಾ ಕರುಣಿಸೆನಗೆ ಹಂಪೆಯರಾಯಾ

**ಸಮಾಪ್ತಂ**